₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXIV - 1 January 2016

PAGES 16



**ಮುಂಬಯಿಯಲ್ಲಿ ಕರ್ನಾಟಕದ ಕಲಾವಿದರ ಚಿತ್ರಕಲೆಯ ಪ್ರದರ್ಶನದ ಉದ್ಘಾಟನೆ ಮೈಸೂರು ಅಸೋಸಿಯೇಶನ್ ಅಧ್ಯಕ್ಷೆಯವರಿಂದ**

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಅಸೋಸಿಯೇಷನ್‌ನಲ್ಲಿ ಹೊಸ ವರ್ಷದ ಆಚರಣೆ








ಡಿಸೆಂಬರ್ 31ರ ಸಾಯಂಕಾಲ ನಮ್ಮ ಅಸೋಸಿಯೇಷನ್‌ನಲ್ಲಿ ಹೊಸ ವರ್ಷವನ್ನು ಬರಮಾಡಿಕೊಳ್ಳಲು ಸದಸ್ಯರಿಗಾಗಿ "ಸ್ನೇಹ ಮಿಲನ"ವನ್ನು ಏರ್ಪಡಿಸಲಾಗಿತ್ತು.

# ಖ್ಯಾತ ವೈಣಿಕ ವಿದ್ವಾನ್ ಶ್ರೀ.ಡಿ.ಬಾಲಕೃಷ್ಣ ಅವರ ವೀಣಾವಾದನ




ಡಿಸೆಂಬರ್ 12 ಶನಿವಾರದಂದು ಮೈಸೂರು ಅಸೋಸಿಯೇಷನ್ನಿನಲ್ಲಿ ಖ್ಯಾತ ವೈಣಿಕ ವಿದ್ವಾನ್ ಶ್ರೀ.ಡಿ.ಬಾಲಕೃಷ್ಣ ಅವರ ವೀಣಾವಾದನದ ಕಛೇರಿಯನ್ನು ಏರ್ಪಡಿಸಲಾಗಿತ್ತು. ಸಂಜೆ 7.00 ಘಂಟೆಗೆ ಕಾರ್ಯಕ್ರಮವು ಆರಂಭವಾಯಿತು. ಶ್ರೀಮತಿ ಶ್ಯಾಮಲಾ ರಾಧೇಶ್ ಅವರು ಶ್ರೀ.ಡಿ.ಬಾಲಕೃಷ್ಣ ಅವರ ಹಾಗೂ ಮೃದಂಗದಲ್ಲಿ ನೆರವಾದ ಶ್ರೀ. ಶ್ರೀರಾಮ್ ಸುಬ್ಬರಾಮನ್ ಅವರ ಪರಿಚಯವನ್ನು ಮಾಡಿಕೊಟ್ಟರು. ನಂತರ ಅಧ್ಯಕ್ಷೆ ಶ್ರೀಮತಿ ಕಮಲಾ ಅವರು ಕಲಾವಿದರಿಗೆ ಪುಷ್ಪಗುಚ್ಛವನ್ನು ನೀಡಿ ಗೌರವಿಸಿದರು. ನಂತರ ಕಛೇರಿಯು ಆರಂಭವಾಯಿತು.

ಗೌಳ ರಾಗದಲ್ಲಿ "ಶ್ರೀ ಮಹಾಗಣಪತಿ" ಎಂಬ ಕೃತಿಯಿಂದ ಆರಂಭವಾಯಿತು. ನಂತರ ಶ್ರೀ ರಂಬನಿ ರಾಗದಲ್ಲಿ ಆಲಾಪನೆ ಮಾಡಿ ತ್ಯಾಗರಾಜರ ಒಂದು ಕೃತಿಯನ್ನು ನುಡಿಸಿದರು. (ಪುಟ 14ಕ್ಕೆ)

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

## ಸಂಪಾದಕೀಯ

# ನೇಸರು

## ತಿಂಗಳೋಲೆ

**ಸಂಪುಟ 34** | **ಜನವರಿ 2016** | **ಸಂಚಿಕೆ 1**

ನಾವು ಬದುಕುವ ಪ್ರತಿಯೊಂದು ಕ್ಷಣವೂ ನಮಗೆ ಹೊಸ ಕ್ಷಣ ಅಲ್ಲವೇ? ಅಂದ ಮೇಲೆ ಈ ಹೊಸ ವರ್ಷ, ಹೊಸ ಕ್ಯಾಲೆಂಡರ್ ಇವೆಲ್ಲವೂ ನಾವು ನಮಗೇನೆ ಕಟ್ಟಿಕೊಂಡ ಭ್ರಮಗಳೇ ಅನಿಸುತ್ತದೆ. ಆದರೂ ಈ ಭ್ರಮೆಗಳನ್ನು ಕಟ್ಟಿಕೊಂಡೇ ಹೊಸ ವರ್ಷಕ್ಕೆ ಕಾಲಿಡುವುದು ಅನಿವಾರ್ಯ. ಹೋದ ವರ್ಷ ಹೋಗಲಿ, ಮುಂದಿನ ವರ್ಷವಾದರೂ ಸರಿಯಾದ ರೀತಿಯಲ್ಲಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ಈ ವರ್ಷವಾದರೂ ನಮ್ಮ ಹಣೆಬರಹದಲ್ಲಿ ಒಳಿತನ್ನು ಕಾಣಬಹುದು ಎನ್ನುವ ಆಶಾವಾದ ನಮ್ಮೊಳಗೆ ಇರುತ್ತದೆ. ಬದುಕು ಅಂದರೆ ಇದೇ ತಾನೇ. ಈ ಜೀವನ ನಿಂತಿರುವುದೇ ಆಶಾವಾದವೆಂಬ ತಳಪಾಯದ ಮೇಲೆ.

ಇನ್ನು ಕೆಲವರಿಗೆ ಡಿಸೆಂಬರ್ 31 ಬಂತೆಂದರೆ ಸಾಕು ವರ್ಷದ ಕೊನೆಯ ದಿನ, ವರ್ಷ ಪೂರ್ತಿ ಮಾಡದಿದ್ದ ಮಸ್ತಿ, ಮಜಾ ಈ ಒಂದು ದಿನದಲ್ಲಿ ಮಾಡುವ ತವಕ. ಕೆಲವರು ತಮ್ಮ ಪರಿವಾರದೊಂದಿಗೆ ಇದನ್ನು ಆಚರಣೆ ಮಾಡ ಬಯಸಿದರೆ, ಇನ್ನು ಕೆಲವರು ತಮ್ಮ ಪರಿವಾರದವರಿಂದ ಕದ್ದುಮುಚ್ಚಿ ತಮ್ಮ ಗೆಳೆಯ, ಗೆಳತಿಯರೊಂದಿಗೆ ಆಚರಿಸ ಬಯಸುತ್ತಾರೆ. ಈ ಪಾರ್ಟಿಯಲ್ಲಿ ಕುಡಿತ, ಹಾಡು, ಡಾನ್ಸ್, ವಿವಿಧ ರೀತಿಯ ತಿಂಡಿ-ತಿನಿಸುಗಳು ಇವುಗಳೇ ಆ ದಿನ ಮುಖ್ಯ ಹೆಡ್‍ಲೈನ್ಸ್‍ಗಳಾಗಿರುತ್ತವೆ. ಡಿಸೆಂಬರ್ 31 ಅಂದಾಕ್ಷಣ ಕುಡಿಯೋದು ಮಾತ್ರ ಅಲ್ಲ. ಖುಷಿ ಕುಡಿತದಿಂದ ಸಿಗೋದಿಲ್ಲ. ಅದು ಭ್ರಮೆ ಅಷ್ಟೇ. ಖುಷಿ ಮನಸ್ಸಿನಿಂದ ಉದ್ಭವವಾಗುವ ಒಂದು ಭಾವನೆ. ತಮ್ಮ ಪರಿವಾರದಿಂದ ದೂರ ಹೋಗಿ ಧಮಾಲ್ ಮಸ್ತಿ ಮಾಡಿದರೆ ಇದರಿಂದ ಆನಂದ ಸಿಗೋದಿಲ್ಲ. ನಿಜವಾದ ಆನಂದ ಸಿಗಬೇಕಾದರೆ ಪರಿವಾರದೊಂದಿಗೆ ಆಚರಿಸಿ ನೋಡಿ. ಒಮ್ಮೆ ಯೋಚಿಸಿ, ನಾವು ಪಾರ್ಟಿ, ಮಸ್ತಿ, ಈ ಧಮಾಲ್ ಯಾಕೆ ಮಾಡುತ್ತೇವೆ... ನಮ್ಮ ಮನಸ್ಸಿನ ಆನಂದಕ್ಕಾಗಿ. ಮನಸ್ಸಿನ ಆನಂದಕ್ಕಾಗಿ ಈ ಹಾಳು ಕುಡಿತದ ಅಗತ್ಯವಿದೆಯೇ? ಹಾಂ ಇದನ್ನು ಒಪ್ಪಿಕೊಳ್ಳೋಣ... ಗೆಳೆಯರೊಂದಿಗೆ ಪಾರ್ಟಿ ಮಾಡಿದರೆ ಆನಂದ ಸಿಗುತ್ತದೆ ಸಿಗುವುದಿಲ್ಲ ಅಂದೆನಿಲ್ಲ ಆದರೆ ನಿಮ್ಮ ಪರಿವಾರದೊಂದಿಗೆ ಆಚರಿಸುವುದರಿಂದ ಅವರ ಮುಖದಲ್ಲಿ ಆ ಖುಷಿ ಯಾವುದಕ್ಕೂ ತುಲನೆ ಮಾಡುವ ಹಾಗಿಲ್ಲ. ಈ ನಶಾ, ಕುಡಿತದಿಂದಲೇ ಹೊಸ ವರ್ಷವನ್ನು ಸ್ವಾಗತಿಸಬೇಕೆಂದಿನಿಲ್ಲ. ಈ ನಶೆ ನಮ್ಮನ್ನು ನಮ್ಮಿಂದ ಬಹುದೂರ ಕೊಂಡೊಯ್ಯುತ್ತದೆ. ಅದೇ ನೀವು ನಿಮ್ಮ ಪರಿವಾರ, ನಿಮ್ಮ ಅಕ್ಕಪಕ್ಕದ ಮನೆಯವರೊಂದಿಗೆ ಸೇರಿ ಆಚರಿಸಿ ನೋಡಿ ನಿಮ್ಮನ್ನು ನಿಮ್ಮವರ ಹತ್ತಿರ ತರುತ್ತದೆ.

ಊಟಕ್ಕೂ ಗತಿಯಿಲ್ಲದವರನ್ನು ನೋಡಿ ಕಲಿಯಿರಿ... ಯಾಕೆ ಅವರುಗಳು ಹೊಸ ವರ್ಷವನ್ನು ಸ್ವಾಗತಿಸುವುದಿಲ್ಲವೇ? ತಮ್ಮಲ್ಲಿರುವುದನ್ನೇ ಹಂಚಿಕೊಂಡು ಎಷ್ಟೊಂದು ಆನಂದದಿಂದ ಇರುತ್ತಾರೆ. ಜೀವನದಲ್ಲಿ ನಾವು ಏನನ್ನು ಯೋಚಿಸುತ್ತಿರುತ್ತೇವೋ ಅದು ಸರಿಯೇ? ಉದಾಹರಣೆ ನನಗೆ ಖುಷಿ ಇದರಿಂದಲೇ ಸಿಗುತ್ತದೆ ಎಂದು ಅದರ ಒಳಗೇನೆ ಬಿದ್ದಿರುತ್ತೇವೆ. ಮತ್ತೊಂದು ಖುಷಿಯ ಬಗ್ಗೆ ಶೋಧನಕ್ಕೆ ಮುನ್ನುಗ್ಗುವುದಿಲ್ಲ.

ಸ್ನೇಹಿತರೆ, ನಿಮಗೆಲ್ಲ ಗೊತ್ತಿರುವ ಹಾಗೆ ಸತತ ಮೂರು ದಿನಗಳ ಕಾಲ ಉಗ್ರರ ದಾಳಿಯಿಂದ ವ್ಯಾಪಕ ಸುದ್ದಿಗೆ ಗ್ರಾಸವಾಗಿದ್ದ ದೇಶದ ಮಹತ್ವದ ವಾಯುನೆಲೆಯಾದ ಪಂಜಾಬನ ಪಠಾಣ್ ಕೋಟ್‍ನಲ್ಲಿ ನಡೆದ ಗ್ರೆನೇಡ್ ಸ್ಫೋಟದಿಂದ ಪ್ರಾಣ ತೆತ್ತು ಹುತಾತ್ಮರಾದ ಎನ್.ಎಸ್.ಜಿ. ಕಮಾಂಡೋ ಲೆಫ್ಟಿನೆಂಟ್ ಕರ್ನಲ್ ನಿರಂಜನ್ ಕುಮಾರ್ ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಮರಳಿ ಬಾರದ ಲೋಕಕ್ಕೆ ತೆರಳಿದ್ದ ನಿರಂಜನ್ ಈ ದೇಶಕ್ಕಾಗಿ ಹೋರಾಡಿ ವೀರ ಮರಣವನ್ನಪ್ಪಿದ್ದಾರೆ. ಅವರ ಬಲಿದಾನ ವ್ಯರ್ಥವಾಗಬಾರದು. ಈ ಹೊಸ ವರ್ಷದಲ್ಲಿ ಭಯೋತ್ಪಾದನೆಯನ್ನು ಬೇರು ಸಮೇತ ಕಿತ್ತೆಯುವಂತಾಗಬೇಕು. ಹೀರೋ ಅಂದರೆ ನಮ್ಮ ಈ ಯೋಧರು. ನಮ್ಮೆಲ್ಲರ ರಕ್ಷಣೆಗೆ ತಮ್ಮ ಎಲ್ಲ ಸುಖ-ಸಂತೋಷಗಳನ್ನು ಬದಿಗೊತ್ತಿ, ತಮ್ಮ ಪರಿವಾರದವರಿಂದ ದೂರವಾಗಿ ನಮ್ಮ ಯೋಧರು ಮಾಡುತ್ತಿರುವ ಸೇವೆಗೆ ನಮ್ಮದೊಂದು ಸಲಾಮ್..

**- ಡಾ. ಜ್ಯೋತಿ ಸತೀಶ್**

# ಮಧುರಚೆನ್ನರ ಅಧ್ಯಯನದ ಹಾದಿಯಲ್ಲಿ

**ಮಧುರಚೆನ್ನರ ಅಧ್ಯಯನದ ಹಾದಿ**
ಲೇ:– **ಅನುಸುಯಾ ಚನವೀರಪ್ಪಾ ಗಲಗಲಿ**
ಪ್ರ:– **ಅಭಿಜಿತ್ ಪ್ರಕಾಶನ, ಮುಂಬಯಿ**

ನಮ್ಮ ವಿಭಾಗದಲ್ಲಿ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ಅನುಸೂಯ ಗಲಗಲಿ ಅವರ ಚೊಚ್ಚಲ ಕೃತಿ ಇಂದು ಲೋಕಾರ್ಪಣೆಗೊಂಡಿರುವುದು ಅತ್ಯಂತ ಸಂತೋಷದ ವಿಷಯ. ಮಧುರಚೆನ್ನರ ಕುರಿತಾದ ಅಧ್ಯಯನದ ಅಧ್ಯಯನವನ್ನು ನಡೆಸಿರುವ ಅನುಸೂಯ ಅವರ ಎಂ.ಫಿಲ್ ಸಂಪ್ರಬಂಧ ಇಂದು ಕೃತಿ ರೂಪದಲ್ಲಿ ತಮ್ಮ ಮುಂದಿದೆ.

'ಮಧುರಚೆನ್ನ' ಎಂಬ ಹೆಸರಿನಿಂದಲೇ ಪ್ರಸಿದ್ಧರಾಗಿದ್ದ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿಯವರು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ಅಧ್ಯಾತ್ಮಿಕವಾಗಿ ಅದ್ಭುತ ಸಾಧನೆಯನ್ನು ಮಾಡಿದವರು. ಕನ್ನಡ ಸಾಹಿತ್ಯಕ್ಕೆ ಮಧುರಚೆನ್ನರ ಕೊಡುಗೆ ಮಹತ್ತರವಾದುದು. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಮಧುರಚೆನ್ನರ ಮುಖ್ಯ ಅಭಿವ್ಯಕ್ತಿ ಕಾವ್ಯ. ಮಧುರ ಚೆನ್ನರ ಸಾಹಿತ್ಯ ರಚನಾಶಕ್ತಿ ಒಂದು ಸ್ವರೂಪಕ್ಕೆ ಬಂದದ್ದು 'ಸತ್ವಪರೀಕ್ಷೆಯಿಂದಲೇ' ಎಂದು ಹೇಳಬಹುದು. ಮಧುರಚೆನ್ನರು ಶಾಲೆಗೆ ಹೋಗಿ ಕಲಿತದ್ದು ಮುಲ್ಕಿ ಪರೀಕ್ಷೆವರೆಗೆ ಮಾತ್ರ. ಆದರೆ ಅವರು ಅಧ್ಯಾತ್ಮ, ಇತಿಹಾಸ ಸಂಶೋಧನೆ, ಭಾಷಾಶಾಸ್ತ್ರ, ಜಾನಪದ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ. ಅವರ ಅಧ್ಯಯನದ ಬಗ್ಗೆ ಈ ಕೃತಿಯಲ್ಲಿ ಲೇಖಕಿ ಅನುಸುಯಾ ಗಲಗಲಿಯವರು ಬಹಳ ಸೊಗಸಾಗಿ ವಿವರಿಸಿದ್ದಾರೆ.

ಮಧುರ ಚೆನ್ನರು ಹಳ್ಳಿಯ ಶಾಲೆಯ ವಿದ್ಯಾರ್ಥಿಯಾಗಿದ್ದರೂ ಅವರ ವಿದ್ಯಾರ್ಥಿ ಜೀವನ ವೈಶಿಷ್ಟ್ಯಪೂರ್ಣವಾಗಿತ್ತು. ಪದವಿ ಇಲ್ಲದೆ ಸ್ನಾತಕೋತ್ತರ ಪರೀಕ್ಷೆಗೆ ಅಭ್ಯಸಿಸುವ ವಿದ್ಯಾರ್ಥಿಯಂತೆ ಅವರ ಅಭ್ಯಾಸ ಕ್ರಮವಾಗಿತ್ತು. ಬೇರೆ ಬೇರೆ ಪುಸ್ತಕಗಳಿಂದ ವಿಷಯಗಳನ್ನು ಸಂಗ್ರಹಿಸುವುದು ಆ ವಿಷಯಗಳನ್ನು ಚಿಕಿತ್ಸಕ ಹಾಗೂ ಸಂಶೋಧಕ ಬುದ್ಧಿಯಿಂದ ಪರಿಶೀಲಿಸುವುದು ಆ ನಂತರ ತಮ್ಮದೇ ಆದ ರೀತಿಯ ಟಿಪ್ಪಣಿಗಳನ್ನು ಸಿದ್ಧಪಡಿಸುವುದು ಇದು ಅವರ ಅಭ್ಯಾಸ ಕ್ರಮವಾಗಿತ್ತು. ಮಧುರಚೆನ್ನರಿಗೆ ಕಲಿಕೆಯ ಮೇಲಿನ ಆಸಕ್ತಿಯನ್ನು, ಅದಕ್ಕಾಗಿ ಅವರು ಪಟ್ಟ ಪರಿಶ್ರಮವನ್ನು ಲೇಖಕಿ ಈ ಕೃತಿಯಲ್ಲಿ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಮಧುರಚೆನ್ನರಿಗೆ ಕವನ ಕಟ್ಟುವುದು ಒಂದು ಆಟವಿದ್ದಂತೆ. ವಿನೋದಕ್ಕೆ ಹೆಂಡತಿ ಹೆಸರು ಹೇಳಲು ಹೇಳಿದರೆ ಅವರು ಕವಿತೆಯನ್ನೇ ಕಟ್ಟಿಬಿಡುತ್ತಿದ್ದರು ಎಂದು ಕೊಣ್ಣೂರ ಹನುಮಂತರಾಯರು ಮಧುರಚೆನ್ನರ ಅಸಾಮಾನ್ಯ ಪ್ರತಿಭೆಯನ್ನು ಗುರುತಿಸಿರುವುದನ್ನು ಇಲ್ಲಿ ಲೇಖಕಿ ಉಲ್ಲೇಖಿಸಿದ್ದಾರೆ.

ಮಧುರಚೆನ್ನರ ದೃಷ್ಟಿ ಆತ್ಮದ ತತ್ವದ ಮೇಲೆ ನೆಲೆಸಿದ್ದರೂ ಅವರು ತಮ್ಮ ಸುತ್ತಮುತ್ತಲಿನ ಜೀವನವನು ಎಂದಿಗೂ ಅಲಕ್ಷಿಸಿದವರಲ್ಲ. ಲೌಖಿಕ ಪಾರಮಾರ್ಥಿಗಳೆರಡರಲ್ಲೂ ಸಮನ್ವಯವನ್ನು ಕಾಪಾಡಿಕೊಂಡು ಬರಲು ಅವರು ಹೆಣಗಿದರು. ಮಧುರಚೆನ್ನರ ಮಡದಿ ಬಸಮ್ಮನವರು ಬಾಣಂತಿಯಾಗಿದ್ದಾಗ ಅವರು ಅನುಭವಿಸಿದ ಯಾತನೆಯನ್ನು ಭಾವಪರವಶರಾಗಿ ಅವರು ಆತ್ಮಕಥನದಲ್ಲಿ ಮನಮಿಡಿಯುವಂತೆ ವಿವರಿಸಿದ್ದಾರೆ. ಹೆಂಡತಿಯನ್ನು ಮಡದಿಯನ್ನಾಗಿ ಕಾಣುವ ಲೋಕದಲ್ಲಿ ಜೀವನದ ಜೊತೆಗಾರ್ತಿಯನ್ನಾಗಿ ಮಾರ್ಪಡಿಸಿಕೊಂಡ ಚೆನ್ನಮಲ್ಲಪ್ಪನಂಥವರು ಎಲ್ಲಿಯೋ ಒಬ್ಬಿಬ್ಬರು ಎಂದು ಅವರ ದಾಂಪತ್ಯ ಜೀವನವನ್ನು ಸಿಂಪಿ ಲಿಂಗಣ್ಣನವರು ತಮ್ಮ ಮಧುರ ಚೆನ್ನರ ಸ್ಮೃತಿಗಳು ಕೃತಿಯಲ್ಲಿ ಬಿಂಬಿಸಿರುವುದು ಮಧುರಚೆನ್ನರಿಗೆ ತಮ್ಮ ಬಾಳಸಂಗಾತಿಯ ಮೇಲಿನ ಅಪರಿಮಿತ ಪ್ರೇಮಕ್ಕೆ ಸಾಕ್ಷಿಯಾಗಿದೆ.

'ಮಧುರಗೀತ' ಮಧುರಚೆನ್ನರ ನೂರು ನುಡಿಗಳ ಒಂದು ನೀಳ್ಗವಿತೆ. ವಿಮರ್ಶಕರು ಇದನ್ನು ಮೈತ್ರಿಯೋಗದ ಖಂಡಕಾವ್ಯವೆಂದೇ ಕರೆದಿದ್ದಾರೆ ಎನ್ನುತ್ತಾರೆ ಡಾ.ಗುರುಲಿಂಗ ಕಾಪಸೆಯವರು. ಇಲ್ಲಿ ಗೆಳೆತನದ ಚಿತ್ರಣದ ಜೊತೆಗೆ ಅಧ್ಯಾತ್ಮಿಕ ಹಾಗೂ ತಾತ್ವಿಕ ವಿಚಾರಗಳೂ ಸೇರಿವೆ. ಇದರಲ್ಲಿ ಐದು ಭಾಗಗಳು. ಅವಕ್ಕೆ 'ಮುದ್ದು' ಎಂದು ಕರೆಯಲಾಗಿದೆ. ಪ್ರತಿ ಮುದ್ದಿನಲ್ಲಿ ಇಪ್ಪತ್ತು ನುಡಿಗಳಿವೆ. ಪ್ರೇಮಮೋಹಗಳ ವ್ಯತ್ಯಾಸ, ಸ್ವಾರ್ಥ–ನಿಸ್ವಾರ್ಥ ಭಾವಗಳ ಚರ್ಚೆ; ನಾವೇಕೆ ಹುಟ್ಟಿದೆವು, ದೇವರ ಅಸ್ತಿತ್ವವೇನು ಎಂಬ ಜಿಜ್ಞಾಸೆ. ಸತ್ಯ ಪ್ರೀತಿಗಳ ಸಂಬಂಧಗಳಿವೆ ಎಂದು ವಿದ್ವಾಂಸರು ಚರ್ಚಿಸಿರುವುದು ಮಧುರಚೆನ್ನರ ಕಾವ್ಯದ ಸೌಂದರ್ಯಕ್ಕೆ ಪ್ರತೀಕ. ಈ ಎಲ್ಲಾ ವಿಷಯಗಳು ಇಲ್ಲಿ ಮಧುರಚೆನ್ನರ ಸಾಧನೆಯನ್ನು ಇನ್ನೂ ಹಲವಾರು ವಿದ್ವಾಂಸರು ಶ್ಲಾಘಿಸಿದ್ದಾರೆ. ಸ.ಸ.ಮಾಳವಾಡರು ಮಧುರಚೆನ್ನರಿಗೆ ದೈವಕೃಪೆಯಿತ್ತು. ಆದ್ದರಿಂದ ಸ್ವಪ್ರಯತ್ನದಿಂದ ದೇಶಭಾಷೆ, ಪರಭಾಷೆಗಳಲ್ಲಿನ ಉದ್ಗ್ರಂಥಗಳನ್ನು ಓದಿ ಅರಗಿಸಿಕೊಂಡರು ಎಂದು ತಮ್ಮ ಅಭಿಪ್ರಾಯ ಪಡುತ್ತಾರೆ. ಮಧುರಚೆನ್ನರಿಗೆ 22 ಭಾಷೆಗಳು ಬರುತ್ತಿದ್ದುದು ಅವರ ಪಾಂಡಿತ್ಯ, ಪ್ರತಿಭೆಗೆ ಸಾಕ್ಷಿ. ಮಧುರಚೆನ್ನರ ಬಾಳಿನ ಎಲ್ಲಾ ಪ್ರಮುಖ ಘಟನೆಗಳನ್ನು, ಸಾಹಿತ್ಯದ ಭಿನ್ನ ಆಯಾಮಗಳನ್ನು ಅಧ್ಯಯನ ಮಾಡಿದ ಲೇಖಕಿ ಉತ್ತಮ ಪ್ರಯತ್ನವನ್ನು ಮಾಡಿರುವುದು ಶ್ಲಾಘನೀಯ ಅಂಶ.

✍ **ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ**

ಈ ಕೃತಿಯ ಮಹತ್ವದ ಅಧ್ಯಾಯಗಳಲ್ಲಿ ಒಂದು 'ಮಧುರಚೆನ್ನರ ಕೃತಿಗಳ ಮಹತ್ವ' . ಮಧುರ ಚೆನ್ನರ ಪ್ರಮುಖ ಕೃತಿಗಳಾದ ನನ್ನ ನಲ್ಲ, ಪೂರ್ವರಂಗ, ಕಾಳರಾತ್ರಿ, ಬೆಳಗು ಕೃತಿಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಮಧುರಚೆನ್ನರ ಅಧ್ಯಾತ್ಮಿಕ ಸಾಧನೆಯನ್ನು ಕವಿತ್ವ ಶಕ್ತಿಯನ್ನು ಒಟ್ಟಾಗಿ ಪ್ರತಿನಿಧಿಸುವ ಒಂದು ಉತ್ಕೃಷ್ಟ ಕೃತಿ ಅವರ 'ನನ್ನ ನಲ್ಲ'. ಡಾ.ಗುರುಲಿಂಗ ಕಾಪಸೆಯವರ ಪ್ರಕಾರ ಮಧುರಚೆನ್ನರ ಕಾವ್ಯದೃಷ್ಟಿಯಲ್ಲಿ ಎದ್ದು ಕಾಣುವ ಮೂರು ಘಟ್ಟಗಳನ್ನು ಈ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. 1) ಮಧುರಚೆನ್ನರು 'ಛಂದೋಬದ್ಧ ವಾಣಿಯೇ ಕವಿತೆ' ಎಂದು ಭಾವಿಸಿದ್ದು, 2) ಭಾವವೇ ಕವಿತೆ ಎಂದು ತಿಳಿದದ್ದು ಹಾಗೂ 3) ಅನುಭಾವ ಕಾವ್ಯಕ್ಕೆ ಸಂಪೂರ್ಣವಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡದ್ದು.

ಈ ಕೃತಿಯಲ್ಲಿ ನಮಗೆ ತಿಳಿದು ಬರುವ ಇನ್ನೊಂದು ಅಂಶವೆಂದರೆ ಮಧುರಚೆನ್ನರು ಪ್ರಕೃತಿಯನ್ನು ಕಾಣುವುದು ಲೌಕಿಕ ದೃಷ್ಟಿಯಿಂದಲ್ಲ ಅಥವಾ ಐಂದ್ರಿಕ ಮೋಹಕ್ಕೆಯಿಂದಲೂ ಅಲ್ಲ. ಅದು ಪರಮಾತ್ಮನ

ನಿವಾಸ ಸ್ಥಾನವೆಂಬ ಪ್ರಜ್ಞೆಯಿಂದಲೇ ಅವರು ನೋಡುತ್ತಾರೆ ಎನ್ನುವ ಅಂಶ ಸ್ಪಷ್ಟವಾಗುತ್ತದೆ. ಅವರು ತಮ್ಮ ಸು:ಖ ದು:ಖ ಎಂಬ ಕವಿತೆಯಲ್ಲಿ ಸುಖಕ್ಕೆ ಮರುಳಾಗದೆ, ದು:ಖಕ್ಕೆ ಬೇಸರಿಸದೆ ಜೀವನ ಸಾಗಿಸುವ ಹಿತವಚನಗಳನ್ನು ಪರಿಣಮಿಸಿವೆ. ವಿ.ಕೃ ಗೋಕಾಕರು ಮಧುರಚೆನ್ನರ ಮಧುರಗೀತೆಯನ್ನು ಮೆಚ್ಚಿ " ಆತ್ಮದ ದಿವ್ಯಾರುಣೋದಯದ ಶ್ರೀಯದ್ಗಂಭೀರ ವರ್ಣನೆ. ಈ ಅದ್ಭುತ ಶಬ್ದರಂಗದ ನಿಶ್ಯಬ್ದತೆಯನ್ನು ಅನುಭವಿಸಿಯೇ ನೋಡಬೇಕು. ಇಲ್ಲಿ ಅನುಭವದ ಆಳ ದರ್ಶನ ಧಬೆಧಭೆಯಾಗಿ ದುಮ್ಮಿಕ್ಕಿದೆ. ಈ ದವಲಗಂಗೆಯ ಧಾವವನ್ನು ನಿಂತು ನೋಡಬೇಕು. ಈ ಅನುಭವವು ಬೆಳಗೆಯಂತೆ ಹೊಳೆಬಂದಂತೆ ಬಂದಿದೆ ಎಂದು ಮೆಚ್ಚುಗೆ ಸೂಚಿಸಿರುವುದು ಮಧುರಚೆನ್ನರ ಕಾವ್ಯಕೌಶಲ್ಯಕ್ಕೆ ಒಳ್ಳೆಯ ನಿದರ್ಶನವಾಗಿದೆ.

ಮಧುರಚೆನ್ನರು ಸ್ಪರ್ಶದ ಬಗ್ಗೆ ಬರೆದ ಸಾಲುಗಳು ಅನುಭವಗಮ್ಯವಾದ ಆದರೂ ಅನಿರ್ವಚನೀಯವಾದುದು. ಸ್ಪರ್ಶ ಅವರ ಹಿಂದಿನ ಗೋಳಾಟಕ್ಕೆ ಸಂಜೀವನವಾಗಿ ಬಂದು ಬಿಚ್ಚಿದೆ ಎಂದಿರುವುದು ಆ ಸ್ಪರ್ಶದ ಮಹತ್ವ ಜೀವನದಲ್ಲಿ ಅಮೂಲ್ಯವಾದುದು ಎನ್ನುವುದನ್ನು ಸುಂದರವಾಗಿ ಮೂಡಿಸಿದ್ದಾರೆ.

'ಹೇಳಿ ತಿಳಿಯದ ಸ್ಪರ್ಶ ಕೇಳಿ ತಿಳಿಯದ ಸ್ಪರ್ಶ
ಉಂಡು ಉಸುರುವ ಸ್ಪರ್ಶ ಕಂಡ ಸ್ಪರ್ಶ
ಗೋಳಿಡುವ ಜೀವಕ್ಕೆ ಸಂಜೀವನದ ಸ್ಪರ್ಶ
ರಂಜನೆಯ ಕಲೆಯಲ್ಲ ರೋಮಹರ್ಷ"

ಇಂತಹ ಅದ್ಭುತ ಕವಿತೆಗಳನ್ನು ರಚಿಸಿ ರೋಮಾಂಚನಗೊಳಿಸಿದ ಮಧುರಚೆನ್ನರ ಬಗ್ಗೆ ಹಲವಾರು ವಿದ್ವಾಂಸರು ಅಧ್ಯಯನ ನಡೆಸಿದ್ದು ಆ ಅಧ್ಯಯನದ ಹಿನ್ನೆಲೆಯಲ್ಲಿ ಅನುಸುಯಾ ಗಲಗಲಿ ಅವರು ಮಾಡಿದ ಅಧ್ಯಯನದ ಹಿಂದಿನ ಶ್ರಮವನ್ನು ಮೆಚ್ಚಲೇ ಬೇಕು.

ಕೃತಿಯ ಮುನ್ನುಡಿಯಲ್ಲಿ ಡಾ.ಜಿ.ಎನ್.ಉಪಾಧ್ಯ ಅವರು "ಬೇಂದ್ರೆ, ಗೋಕಾಕ, ಕಣವಿ, ಕಾಪಸೆ ಮೊದಲಾದವರು ಮಧುರಚೆನ್ನರ ಸಾಹಿತ್ಯದ ಆಯಮ ಅನನ್ಯತೆಯನ್ನು ಗುರುತಿಸಿದ್ದಾರೆ. ಮಧುರಚೆನ್ನರ ಸಾಹಿತ್ಯದ ಬಗ್ಗೆ ನಡೆದ ಚಿಂತನ ಮಂಥನ, ವಿಮರ್ಶೆ, ವಿಶ್ಲೇಷಣೆಯ ಅವಲೋಕನ, ಮಧುರಚೆನ್ನರ ಜೀವನ, ಕೃತಿಗಳ ಮಹತ್ವದ ಹಿನ್ನೆಲೆಯಲ್ಲಿ ಅನುಸೂಯ ಅವರು ಈ ಸಂಪ್ರಬಂಧವನ್ನು ರಚಿಸಿದ್ದಾರೆ. ಮಧುರಚೆನ್ನರ ಸಾಹಿತ್ಯ ಸಾಧನೆಯನ್ನು ಹೊಸತಲೆಮಾರಿಗೆ ಪರಿಚಯಿಸಲು ಈ ಕೃತಿ ನೆರವಾದೀತು ಎಂಬ ಆಶಯ ನನ್ನದು ಎಂದಿದ್ದಾರೆ. ಅನುಸೂಯ ಗಲಗಲಿ ಅವರ ಈ ಕೃತಿ ಚೊಚ್ಚಲ ಕೃತಿಯಾಗಿದ್ದು ಅನೇಕ ನ್ಯೂನತೆಗಳ ನಡುವೆಯೂ ಅರಳಿ ನಿಂತಿದೆ. ವಾಕ್ಯ ರಚನೆಗಳು ಗೊಂದಲಮಯವಾಗಿದ್ದು ಆ ಕಡೆಗೆ ಗಮನಹರಿಸಬೇಕಾದ ಅಗತ್ಯವಿದೆ. ಒಟ್ಟಿನಲ್ಲಿ ಲೇಖಕಿ ಮಧುರಚೆನ್ನರ ಬಗ್ಗೆ ನಡೆಸಿದ ಅಧ್ಯಯನ, ಶ್ರಮ ಎಲ್ಲವೂ ಇಂದು ಕೃತಿ ರೂಪದಲ್ಲಿ ಅಭಿಜಿತ್ ಪ್ರಕಾಶನದ ಕುಸುಮವಾಗಿ ಅರಳಿ ಸಾರ್ಥ್ಯಕ್ಯವನ್ನು ಪಡೆದಿದೆ. ಅವರಿಗೆ ಅಭಿನಂದನೆಗಳು.

■

# ಸ್ಪರ್ಶ

ಚಿಗುರೊಡೆದ ತಳಿರಂತೆ
ಮಳೆ ಹನಿಯ ತುಂತುರಂತೆ
ತಂಪೀಯುವ ರಶ್ಮಿಯ ಕಿರಣದಂತೆ
ಇಂಪಾಗಿ ಕಂಪಾಗಿ
ಮೃದು ಮಧುರ ಭಾವದಲಿ
ಮೈ ಮನವ ಮುತ್ತಿಡುವ ಈ ಸ್ಪರ್ಶ ||

ಸ್ವರ್ಗದಾ ಬಾಗಿಲಲಿ
ಮೆತ್ತನೆಯ ಹೂ ಹಾಕಿ
ಒಲವೆಂಬ ಅರಮನೆಯಲಿ
ಪರಿಮಳದ ಸುಗಂಧ ಬೀರಿ
ಒಡಲೆಂಬ ಹೂವೆಸಳಲಿ
ತಾರುಣ್ಯಬೀರಿ ಜುಮ್ಮೆನ್ನುವ ಈ ಸ್ಪರ್ಶ ||

ಕಣ್ಗಳಲಿ ಕೋಲ್ಮಿಂಚು
ಹೃದಯದಲಿ ಭಾವ ತರಂಗ
ಬಿರಿಯುತಿರುವ ತುಟಿಯಲಿ
ಹೂ ನಗೆಯ ಮಿಂಚು
ಸಾವಿರ ಕಂಪನಗಳ ಹೊಂಚು
ತನು- ಮನ ಮಿಡಿಯುತಿರಲು
ಅರೆ ಕ್ಷಣ ಜುಮ್ಮೆನಿಸುವ ಈ ಸ್ಪರ್ಶ ||

ಭೋರ್ಗರೆವ ಅಲೆಗಳ ಹತ್ತಿಕ್ಕಿ
ಚಿಮ್ಮುತಿರುವ ಕಣ್ಣ ಕಾಂತಿಯಲಿ
ಬಯಕೆಯೆಂಬ ಕಟ್ಟಿದ ಗೂಟವ
ಕಿತ್ತೆಸೆದು ಎಲ್ಲೆಂದರಲಿ ಮನಬಿಚ್ಚಿ
ಹಾರುತಿರಲು ಮುಂಗುರುಳ ನೇವರಿಸಿ
ಕೊಂಡಾಡುವ ಅಪ್ಯಾಯಮಾನ ಈ ಸ್ಪರ್ಶ ||

– **ಶಾರದಾ ಎ. ಅಂಚನ್**


## MATRIMONIAL

Well Settled Madhav Brahmin BE/M.S., Kannada Speaking

Height : 6ft 1".

Age : 27 years.


Gotra : Kaushik, Nakshatra – Hasta.
Kanya Rasi, Working in U.S.

*Interested may contact at*

Phone number : +91 96193 57670 or 022 – 24057629

Email : ramarao010@gmail.com

# ಚುಟುಕ ಬ್ರಹ್ಮ ದಿನಕರ ದೇಸಾಯಿ



ಬೇಲೂರು ರಾಮಮೂರ್ತಿ

ಅದೊಂದು ಕಾಲವಿತ್ತು. ಪತ್ರಿಕೆ ಬಂದೊಡನೇ ಜನ ಕಣ್ಣಾಡಿಸುತ್ತಿದ್ದುದು ದಿನಕರ ದೇಸಾಯಿಯವರ ನಾಲ್ಕೇ ಸಾಲಿನ ಚುಟುಕದ ಕಡೆಗೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮುಂತಾದ ವಿಷಯಗಳ ಬಗೆಗೆ ಅವರಿಗೆ ಅನಿಸಿದ ಅಭಿಪ್ರಾಯಗಳನ್ನು ಖಂಡತುಂಡವಾಗಿ ನಿರೂಪಿಸುತ್ತಿದ್ದವರು ದಿನಕರ ದೇಸಾಯಿಯವರು.

ಪ್ರೈಮರೀ ಶಾಲೆಯ ಮಾಸ್ತರರ ಮಗನಾಗಿ 1909ರಂದು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹೊಂಡಕ್ಕಲ್ ಗ್ರಾಮದಲ್ಲಿ ಜನಿಸಿದ ದೇಸಾಯಿಯವರು ಹುಟ್ಟಿದ್ದೂ ಬಡವರಾಗಿ ಮತ್ತು ಜೀವನ ಮುಗಿಸಿದ್ದೂ ಬಡವರಾಗಿಯೇ. ಚಿಕ್ಕಂದಿನಲ್ಲಿಯೇ ಅಮ್ಮನನ್ನು ಕಳೆದುಕೊಂಡ ಅವರಿಗೆ ತಾತನದೇ ಆಸರೆ. ತಂದೆಯವರು ಬಿಡುವಿನ ವೇಳೆಯಲ್ಲಿ ತೆಂಗಿನ ನಾರು ತಯಾರಿಸಿ ನಾಲ್ಕು ಕಾಸು ಸಂಪಾದನೆ ಮಾಡುತ್ತಿದ್ದರು. ಬಡತನವನ್ನು ಚಿಕ್ಕಂದಿನಿಂದಲೇ ಕಂಡಿದ್ದರಿಂದಲೋ ಏನೋ ದೇಸಾಯಿಯವರು ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿ ರೂಪುಗೊಂಡರು. ಕನ್ನಡ ಎಂ.ಎ ಮುಗಿಸಿದ ಅವರು ಗೋಪಾಲಕೃಷ್ಣ ಗೋಖಲೆಯವರು ಸ್ಥಾಪನೆ ಮಾಡಿದ ಸರ್ವೆಂಟ್ಸ್ ಆಫ್ ಇಂಡಿಯನ್ ಸೊಸೈಟಿಯ ಸದಸ್ಯರಾದರು. ಆಗಿನ ಕಾಲಕ್ಕೆ ಸದಸ್ಯರಾಗುವವರು ನಾವು ಯಾವ ಪ್ರತಿಫಲವನ್ನೂ ನಿರೀಕ್ಷಿಸದೇ ತಾಯ್ನಾಡಿಗೆ ಸೇವೆ ಸಲ್ಲಿಸುತ್ತೇವೆ ಎಂದು ಪ್ರಮಾಣವಚನ ಸ್ವೀಕರಿಸಬೇಕಿತ್ತು.

ಹೀಗೆ ಪ್ರಾರಂಭವಾದ ಅವರ ಸಾಮಾಜಿಕ ಸೇವೆ ಮೊದಲಿಗೆ ಮುಂಬಯಿಯ ಹಡಗು ನೌಕರರ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದರಿಂದ ಪ್ರಾರಂಭವಾಗಿ ಅದು ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಿಗೂ ವ್ಯಾಪಿಸಿತು. ಮುಂಬಯಿಯಲ್ಲಿ ನೆಲೆಸಿದ್ದ ಅವರು ಸುಮಾರು ಹನ್ನೆರಡು ವರ್ಷಗಳಷ್ಟು ಕಾಲ ಮುಂಬಯಿ ಕಾರ್ಪೋರೇಷನ್ನಿನ ಸದಸ್ಯರಾಗಿದ್ದರು ನಂತರ ಅವರು ಹುಟ್ಟೂರು ಉತ್ತರ ಕನ್ನಡ ಜಿಲ್ಲೆಗೆ ಬಂದು ತಮ್ಮ ಸಾಮಾಜಿಕ ಚಟುವಟಿಕೆಗಳನ್ನು ಪ್ರಾರಂಭಿಸಿದರು. ರೈತರ ಪರವಾಗಿ ಹೋರಾಟ ಮಾಡಿ ಉಳುವವನೇ ಭೂಮಿಯ ಒಡೆಯನನ್ನಾಗಿಸಿದರು. 1957ರಲ್ಲಿ ಕೆನರಾ ವೆಲ್‌ಫೇರ್ ಟ್ರಸ್ಟ್ ಪ್ರಾರಂಭಿಸಿ ಅದರ ಮುಖಾಂತರ ಅನೇಕ ಶಾಲಾ ಕಾಲೇಜುಗಳನ್ನೂ ಸ್ಥಾಪನೆ ಮಾಡಿದರು. ಇತ್ತೀಚೆಗೆ ಈ ಟ್ರಸ್ಟ್ ತನ್ನ 50ನೇ ವರ್ಷಾಚರಣೆ ಸಮಾರಂಭವನ್ನು ಆಚರಿಸಿಕೊಂಡಿತು. ಈಗ ಈ ಟ್ರಸ್ಟ್ ಸುಮಾರು ಒಟ್ಟು 18 ಕೇಂದ್ರಗಳಲ್ಲಿ 37 ಶಾಲೆಗಳನ್ನು ನಡೆಸುತ್ತಿದ್ದು ಅದರಲ್ಲಿ ಸುಮಾರು 10 ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಅಂಕೋಲೆಯಲ್ಲಿ ಗೋಖಲೆ ಸೆಂಟಿನರಿ ಕಾಲೇಜು ಸ್ಥಾಪನೆ ಮಾಡಿದರು. ತಾಯ್ನಾಡಿಗೆ ಹೆಚ್ಚಿನ ಸೇವೆ ಸಲ್ಲಿಸಲು ನೆರವಾಗಲಿ ಎಂದು ಅವರು ಚುನಾವಣೆಗೆ ನಿಂತು ಗೆದ್ದು ಒಂದು ಅವಧಿಗೆ ಲೋಕಸಭೆ ಸದಸ್ಯರಾಗಿದ್ದರು. ಆದರೆ ಜನರ ಅಜ್ಞಾನ ಮತ್ತು ರಾಜಕೀಯ ಪಕ್ಷಗಳ ಕುತಂತ್ರಗಳಿಂದ ಅವರು ಮತ್ತೆ ಚುನಾಯಿತರಾಗಲೇ ಇಲ್ಲ. ಇವ್ಯಾವುದೂ ಅವರು ಸಾಮಾಜಿಕ ಸೇವೆಗೆ ತೊಡಕಾಗಲಿಲ್ಲ.

ದೇಸಾಯಿಯವರ ಬರವಣಿಗೆ ಪ್ರಾರಂಭವಾದದ್ದು ಅವರ ಇಪ್ಪತ್ತನೇ ವಯಸ್ಸಿನಲ್ಲಿ. ಮಾತೃಭಾಷೆಯಾದ ಕೊಂಕಣಿಯಲ್ಲಿ. ಬರೀ ಆಡುಭಾಷೆಯಾದ ಕೊಂಕಣಿ ಕನ್ನಡ ಲಿಪಿಯನ್ನೇ ಆಧರಿಸಿತ್ತು. ಕೊಂಕಣಿ ಕವಿತೆಗಳು ಉತ್ತರ ಕನ್ನಡದ ಜನರ ಮನಸ್ಸನ್ನು ಸೂರೆಗೊಂಡು ಅನೇಕ ಸಮಾರಂಭಗಳಲ್ಲಿ ದೇಸಾಯಿಯವರ ಕವಿತೆಗಳನ್ನು ಹಾಡುತ್ತಿದ್ದರು. ಇಷ್ಟಾದರೂ ಕೊಂಕಣಿ ಕವನ ಸಂಗ್ರಹ ತರುವ ಅವರ ಕನಸು ಕನಸಾಗಿಯೇ ಉಳಿದಿದ್ದು 1981ರಲ್ಲಿ ಅಂದ್ರೆ ಅವರ ಸಾವಿಗೆ ಕೇವಲ ಒಂದೇ ವರ್ಷ ಇರುವಾಗ ಪ್ರಕಟವಾಗಿತ್ತು.

ಪತ್ನಿ ಇಂದಿರಾ ಮತ್ತು ಹೆಣ್ಣು ಇಬ್ಬರು ಮಕ್ಕಳು ಉಷಾ ಪ್ರಧಾನ್ ಅವರು ಮುಂಬಯಿಯಲ್ಲಿದ್ದರೆ ಕಿರಿಯ ಮಗಳು ನಿಷಾ ವೆಂಗ್ಸರ್ಕಾರ್ ಬರೋಡಲ್ಲಿದಾರೆ. ದಿನಕರ ದೇಸಾಯಿಯವರು 6.11..1982ರಲ್ಲಿ ನಿಧನರಾದರೆ ಅವರ ಪತ್ನಿಯವರು 2002 ರಲ್ಲಿ ನಿಧನರಾದರು.

ಮೊದಲಿಗೆ ದೇಸಾಯಿಯವರು ಇನ್ನಿತರ ಕವಿಗಳಂತೆ ದೀರ್ಘ ಕವಿತೆಗಳನ್ನೇ ಬರೆದರು. ಅವರ ಪ್ರಥಮ ಕವನ ಸಂಕಲನ 1950ರಲ್ಲಿ ಪ್ರಕಟವಾಯಿತು. ನಂತರ 1955ರಲ್ಲಿ ಹೂ ಗೊಂಚಲು ಎನ್ನುವ ಇನ್ನೊಂದು ಸಂಕಲನವನ್ನೂ ಹೊರತಂದರು. ತರುಣರ ದಸರೆ – ಕಡಲ ಕನ್ನಡ – ದಾಸಾಳ, ಮಕ್ಕಳ ಗೀತೆಗಳು ನಂತರ ಪ್ರಕಟವಾದವು. ಈ ಸಂಗ್ರಹದ ಒಂದು ಕವಿತೆ ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಇಂದೂ ಜನಪ್ರಿಯವಾಗಿದೆ. ಪ್ರವಾಸ ಸಾಹಿತ್ಯದಲ್ಲೂ ಕೈಯಾಡಿಸಿರುವ ದೇಸಾಯಿಯವರು ನಾ ಕಂಡ ಪಡುವಣ ಕೃತಿ ರಚಿಸಿದ್ದಾರೆ. ಕವನದ ಇನ್ನಿತರ ಪ್ರಾಕಾರಗಳಲ್ಲಿ ಆಸಕ್ತಿ ತಳೆದ ದೇಸಾಯಿಯವರು ಮೊದಲಿಗೆ ನಾಲ್ಕೇ ಸಾಲಿನ ಚುಟುಕಗಳನ್ನು ಬರೆದರು. ಅಂಕೋಲದಿಂದ ಜನಸೇವಕ ಎನ್ನುವ ಪತ್ರಿಕೆ ಪ್ರಾರಂಭಿಸಿದ ಜನಸೇವಕ ಪತ್ರಿಕೆಯಲ್ಲಿ ಚುಟುಕಗಳು ಪ್ರಕಟವಾದಾಗ ಅವು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಸಂಚಲನವನ್ನೇ ಉಂಟುಮಾಡಿದ್ದವು. ಜನಸೇವಕ ಪತ್ರಿಕೆಗೆ ಅನೇಕ ಹಿರಿಯರು ಬರೆಯುತ್ತಿದ್ದರು. ಅವರಲ್ಲಿ ಪ್ರಮುಖರು ಗೌರೀಶ ಕಾಯ್ಕಿಣಿಯವರು.

ದಿನಕರ ದೇಸಾಯಿಯವರು ಒಟ್ಟು 12 ಕೃತಿಗಳನ್ನು ರಚಿಸಿದ್ದಾರೆ. ಅವರ ದಿನಕರನ ಚೌಪದಿ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರ ಚೌಪದಿಗಳಲ್ಲಿ ನವರಸಗಳೂ ಬೆರೆತಿರುತ್ತಿದ್ದವು. ಹಾಗೆ ನೋಡಿದರೆ ಬಂಡಾಯ ಪರಂಪರೆ ಆರಂಭವಾಗುವ ಮೊದಲೇ ದೇಸಾಯಿಯವರು 1931ರಲ್ಲಿ ಬಾರ್ಡೋಲಿ ಸತ್ಯಾಗ್ರಹದ ಬಗೆಗೆ ಚುಟುಕು ಪದ್ಯಗಳನ್ನು ರಚಿಸಿದ್ದರು. ಈ ಚುಟುಕಗಳಿಂದಲೇ ಅವರು ಖ್ಯಾತರಾಗಿ ಅವರನ್ನು ಚುಟುಕ ಬ್ರಹ್ಮ ಎಂದೇ ಕರೆಯುತ್ತಿದ್ದರು

ಅವರ ಚುಟುಕದ ಸ್ವಾರಸ್ಯದ ಒಂದು ಉದಾಹರಣೆ ಎಂದರೆ ಅವರು ಹಾಲಕ್ಕಿ ಜನಾಂಗದ ಬಗೆಗೆ ಬರೆದ ಚುಟುಕ ದೀನ ದಲಿತರ ಬಗೆಗೆ ಇದ್ದ ಕಾಳಜಿಯನ್ನು ತೋರಿಸುತ್ತದೆ. ಆ ಚುಟುಕ ಹೀಗಿದೆ.

ಇವನ ಮನೆಯೊಳಗಿಲ್ಲ ಸಾಕಷ್ಟು ಅಕ್ಕಿ
ಆದರೂ ಈತನಿಗೆ ಹೆಸರು ಹಾಲಕ್ಕಿ

ಹಾಲು ಅಕ್ಕಿಗಳೆರಡೂ ಹೆಸರೊಳಗೆ ಮಾತ್ರ
ಹಸಿವೆಯೆಂಬುದು ಇವನ ಹಣೆಯ ಕುಲಗೋತ್ರ

ಮೊದಲಿಂದಲೂ ಬಹಳ ಸರಳ ಜೀವನಕ್ಕೆ ಒಗ್ಗಿಹೋಗಿದ್ದ ದೇಸಾಯಿಯವರು ಕಡೆಯತನಕವೂ ಅದನ್ನೇ ರೂಢಿಸಿಕೊಂಡಿದ್ದರು. ಅವರಿಗೆ 60 ವರ್ಷ ತುಂಬಿದಾಗ ಅವರ ಸ್ನೇಹಿತರೆಲ್ಲಾ ಸೇರಿ ಷಷ್ಟ್ಯಬ್ಧಿ ಸಮಾರಂಭ ಏರ್ಪಾಡು ಮಾಡಿದರೆ ದೇಸಾಯಿಯವರು ಸಮಾರಂಭಕ್ಕೇ ಗೈರು ಹಾಜರಾಗಿ ಕಡೆಗೆ ಒಂದು ಚುಟುಕವನ್ನು ಬರೆದು ಕಳಿಸಿದರು.

ನನಗೇಕೆ ಷಷ್ಟ್ಯಬ್ದಿ ಸಾಕು ಬರವಣಿಗೆ
ಕವಿಗೆ ಬೇಕಾಗಿಲ್ಲ ಯಾವ ಮೆರವಣಿಗೆ
ಮೂಲೆಯಲಿ ಕುಳಿತು ಬರೆದರೆ ಒಂದು ಪದ್ಯ
ತಾಯ್ನುಡಿಗೆ ಅರ್ಪಿಸಿದ ಹಾಗೆ ನೈವೇದ್ಯ

ಅವರ ಕೆಲವು ಚುಟುಕಗಳ ವೈಖರಿಯನ್ನು ನೋಡೋಣ

ನಾ ಬರೆದ ಚುಟುಕಗಳ ಸಂಖ್ಯೆ ವಿಪರೀತ
ಶೇಕಡಾ ತೊಂಭತ್ತು ಹೊಡೆಯುವುವು ಗೋತ
ಉಳಿದ ಹತ್ತರ ಪೈಕಿ ಏಳೆಂಟು ಸತ್ತು
ಒಂದೆರಡು ಬದುಕಿದರೆ ಅವು ಮಾತ್ರ ಮುತ್ತು

ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ ಎನ್ನುವ ಹಾಗೆ ಪ್ರತಿಯೊಬ್ಬರೂ ತಾವು ಹುಟ್ಟಿದ ಊರಲ್ಲೇ ಮಣ್ಣಾಗಬೇಕು ಎನ್ನುವ ಬಯಕೆ ಇರುತ್ತದೆ. ಅದಕ್ಕೂ ಒಂದು ಚುಟುಕು ಹೀಗಿದೆ

ನಾನು ಹುಟ್ಟಿದ್ದು ಸಖಿ ಅಂಕೋಲೆಯಲ್ಲಿ
ಚಿಂತೆಯಿಲ್ಲದೇ ಸಾಯಬೇಕೆಂಬೆ ಅಲ್ಲಿ
ಅಂಕೋಲೆ ಎನ್ನುವುದು ಕನ್ನಡದ ಕಡಲು
ಈ ಕಡಲಿನೊಳಗಿರಲಿ ದಿನಕರನ ಒಡಲು

ಅವರ ಬಹಳಷ್ಟು ಚುಟುಕಗಳು ರಾಜಕೀಯ ವಿಡಂಬನೆಗೆ ಹೆಸರಾಗಿದ್ದವು. ಆಗಿನ ದಿನಗಳಲ್ಲಿ ಜನರು ಇವುಗಳನ್ನು ಹುಚ್ಚೆದ್ದು ಓದುತ್ತಿದ್ದರು. ಅಂದು ಬರೆದಿದ್ದ ರಾಜಕೀಯ ಚುಟುಕಗಳು ಇಂದಿಗೂ ಪ್ರಸ್ತುತವಾಗಿವೆ ಎಂದರೆ ಅಚ್ಚರಿ ಸಹಜ. ಬಹುಶ: ಅವರು ಮುಂಬಯಿ ಕಾರ್ಪೊರೇಷನ್ನಿನ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ ರಾಜಕೀಯವನ್ನು ಹತ್ತಿರದಿಂದ ಕಂಡಿದ್ದರಿಂದ ಅವರಲ್ಲಿ ಈ ಬಗೆಯ ಕ್ರಿಯಾತ್ಮಕತೆ ಬಂದಿರಬಹುದು. ಅಂಥಾ ಕೆಲವು ಚುಟುಕಗಳು ಹೀಗಿವೆ.

ರಾಜಕೀಯ ಪುಡಾರಿ
ಅಲಲಾ ಕೇಳೋ ಮಗನೇ ಪೌರುಷದ ಸುದ್ದಿ
ಎಷ್ಟು ಮಂದಿಗೆ ಉಂಟು ಈ ತರದ ಬುದ್ದಿ
ಹತ್ತು ವರುಷದ ಹಿಂದೆ ಇತ್ತು ಲಂಗೋಟಿ
ಈ ಹೊತ್ತು ನೋಡಿದರೆ ಬರೀ ಹತ್ತು ಕೋಟಿ

ಪಕ್ಷಗಳು
ಈ ಪಕ್ಷ ಆ ಪಕ್ಷ ಅಲ್ಲ ಒಂದೆರಡು
ಕೊನೆಗೆ ನೋಡಿದರೆ ಸಖಿ ಎಲ್ಲವೂ ಬರಡು
ಬಡವರಿಗೆ ತಪ್ಪಿಲ್ಲ ಉಪವಾಸ ತಾನೇ
ಇದಕೆನ್ನುವರು ರಾಜಕೀಯದ ಬೇನೆ

ಆಳುವ ಪಕ್ಷ
ಅದೃಷ್ಟಶಾಲಿ ಈ ಪಕ್ಷದ ಪುಢಾರಿ
ಕೆಸರು ಹತ್ತುವುದಿಲ್ಲ ಬಿದ್ದರೂ ಜಾರಿ
ಈತನಿಗೆ ಉಂಟು ಇನ್ನೊಂದು ಅನುಕೂಲ
ಸೋತುಹೋದರೆ ಆಗುವನು ರಾಜ್ಯಪಾಲ

ಈ ಚುನಾವಣೆ
ಈ ಚುನಾವಣೆಯೊಂದು ಭಾರೀ ವ್ಯಾಪಾರ
ಮಾರಲಿಕ್ಕೆ ತೆಗೆದಿಟ್ಟ ಸರಕು ಸರಕಾರ
ಯಾರು ಬೇಕಾದರೂ ಕೊಳ್ಳಬಹುದಂತೆ
ಐದು ವರುಷಕ್ಕೊಮ್ಮೆ ನಡೆಯುತ್ತದೆ ಸಂತೆ

ದಿನಕರ ದೇಸಾಯಿಯವರು ನಮ್ಮ ದೇವರು, ಕವಿಗಳು ಮುಂತಾದವರ ಬಗೆಗೂ ತಮ್ಮ ಅನಿಸಿಕೆಗಳನ್ನು ಚುಟುಕಗಳ ಮುಖಾಂತರ ಪ್ರಸ್ತುತಪಡಿಸಿದ್ದಾರೆ ಅವುಗಳಲ್ಲಿ ಕೆಲವು.

ಗಣಪತಿಯ ಹೊಟ್ಟೆ
ಗಣಪತಿಯ ಹೊಟ್ಟೆ ಒಡೆಯಿತು ಬಹಳ ತಿಂದು
ಉದರಕಲ್ಕೆ ಸುತ್ತು ಹಾಕಿತು ಸರ್ಪ ಬಂದು
ಗುಣಹೊಂದಿದನು ಗಣಪ ಈ ಸುತ್ತಿನಿಂದ
ಘಟಸರ್ಪವೂ ಒಳಿತು ಮಾಡಬಹುದೆಂದ

ದೇವರ ಪೂಜೆ
ನಿತ್ಯವೂ ಉಂಟು ದೇವರ ಪೂಜೆ ಉದ್ದ
ನಡತೆ ನೋಡಿದರೆ ಯಾವುದೂ ಇಲ್ಲ ಶುದ್ಧ
ಪಾಪ ಪರಿಹಾರಕೆ ಬೇಕು ಈ ಪೂಜೆ
ಪುಣ್ಯವಂತರಿಗಿಲ್ಲ ದೇವರ ಮುಲಾಜೆ

ಆದಿಕವಿ ಪಂಪನಿಗೂ ಒಂದು ಚುಟುಕವನ್ನು ದೇಸಾಯಿಯವರು ಬರೆದಿದ್ದಾರೆ

ಜನ್ಮಜನ್ಮಾಂತರಕೆ ಬನವಾಸಿ ನಾಡು
ನಂದನದಿ ಮರಿದುಂಬಿಯನ್ನಾಗಿ ಮಾಡು
ಎಂದು ಹಾಡಿದ ಆ ನಿನ್ನ ಹೃದಯದೊಲುಮೆ
ಇಂದಿಗೂ ನಮ್ಮ ನಾಡಿನ ಮಹಾ ಮಹಿಮೆ

ದೇಸಾಯಿಯವರ ಚುಟುಕಗಳು ಎಂದರೆ ಅವುಗಳ ವೈಖರಿಯೇ ಬೇರೆ. ಎಲ್ಲವುಗಳನ್ನೂ ಬರೆಯುತ್ತಾ ಹೋದರೆ ಪುಟಗಳೇ ಸಾಲದೇ ಹೋದೀತು. ನಮ್ಮ ಸಾಹಿತ್ಯ ಪರಂಪರೆಯಲ್ಲಿ ಒಬ್ಬ ಧೀಮಂತ ಬರಹಗಾರ ಎನಿಸಿಕೊಂಡಿದ್ದ ದೇಸಾಯಿಯವರದು ಒಂದು ಸಾರ್ಥಕ ಬದುಕು.

ದಿನಕರ ದೇಸಾಯಿಯವರ ನೆನಪಿಗಾಗಿ ಅಕಾಡೆಮಿ ಆಫ್ ಹ್ಯೂಮರ್ ಸಂಸ್ಥೆಯು ಶುಕ್ರವಾರ 25.12.2015ರಂದು ಜಯನಗರದ ಎಚ್. ಎನ್ ಕಲಾಕ್ಷೇತ್ರದಲ್ಲಿ ಹಾಸ್ಯೋತ್ಸವವನ್ನು ಆಯೋಜಿಸಿತ್ತು. ಅಲ್ಲಿಗೆ ಹೋದವರಿಗೆ ಹಾಸ್ಯ ಸಂತರ್ಪಣೆಯ ಜೊತೆಗೆ ಚುಟುಕಗಳ ಸಂತರ್ಪಣೆಯೂ ಆಯಿತು.

■

# ಶಿಮುಂಜೆ ಪರಾರಿ ಅಭಿನಂದನ ಕಾರ್ಯಕ್ರಮ

ದೂರದ ಮುಂಬಯಿ ನಗರದಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ ಸಂಸ್ಕೃತಿಯ ಬಲವರ್ಧನೆಗೆ ಶ್ರಮಿಸಿದ ಧೀಮಂತ ಚೇತನ ಶಿಮುಂಜೆ ಪರಾರಿ. ಶಿಮುಂಜೆ ಪರಾರಿ ಎಂದೇ ಪ್ರೀತ್ಯಾದರಗಳಿಂದ ಪರಿಚಿತರಾಗಿರುವ ಸೀತಾರಾಮ ಶೆಟ್ಟಿ ಅವರದು ಬಹುಮುಖ ಪ್ರತಿಭೆ. ಇವರು ಜನಿಸಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯಲ್ಲಿ. ಬೆಳೆದದ್ದು ಮುಂಬಯಿಯಲ್ಲಿ. ಕವಿಯಾಗಿ, ಅನುವಾದಕರಾಗಿ, ನಟರಾಗಿ, ಶಿಕ್ಷಕರಾಗಿ ಮುಂಬಯಿ ಕನ್ನಡಿಗರ ಸಾಂಸ್ಕೃತಿಕ ಲೋಕದಲ್ಲಿ ಹಾಸುಹೊಕ್ಕಾಗಿದ್ದಾರೆ. ಬಹುಮುಖ ಪ್ರತಿಭೆಯ ಶಿಮುಂಜೆ ಪರಾರಿ ಅವರು ಸಾಂಸ್ಕೃತಿಕ ಪರಿಚಾರಿಕೆಯಾಗಿಯೂ ಗಮನಾರ್ಹವಾದುದು.

ಶಿಮುಂಜೆಯವರು ಸಮಕಾಲೀನ ಕನ್ನಡ ಕವಿಗಳಲ್ಲಿ ಮುಖ್ಯರಾದವರು. ನವೋದಯ ಕಾಲದ ಮುಖ್ಯ ಕವಿಗಳಂತೆ ಇವರ ಬದುಕು ಮತ್ತು ಸಾಹಿತ್ಯ ಎರಡೂ ಮಹತ್ವ ಪೂರ್ಣವಾದುದು.

ಅವರ ಸೃಜನಶೀಲತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಕಟವಾಗಿದೆ. ಕನ್ನಡ, ತುಳು, ಮರಾಠಿ, ಹಿಂದಿ, ಗುಜರಾತಿ ಮೊದಲಾದ ಭಾಷೆಗಳಲ್ಲಿ ನಿರರ್ಗಳ ವ್ಯವಹಾರ ಮಾಡಬಲ್ಲ ಶಿಮುಂಜೆಯವರು ಹಿಂದಿ, ಮರಾಠಿ, ಗುಜರಾತಿಯ ಶ್ರೇಷ್ಠ ಕಥೆ, ನಾಟಕ, ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನವಪ್ರಭಾತ, ನಿಯೋಗ, ಹುತಾತ್ಮರು, ಹಣತೆ, ಯಾರು ನನ್ನವರು?, ನಾನು, ನೀನು ಮತ್ತು. . . ಮೊದಲಾದ ಕೃತಿಗಳನ್ನು ಅವರು ಅನುವಾದಿಸಿದ್ದಾರೆ. ಯಾನ್ ಪಣ್ಪಿನಿ ಇಂಚ ನೂರು ತುಳು ಚುಟುಕುಗಳ ಐದು ಕೃತಿಗಳನ್ನು ಪ್ರಕಟಿಸಿ ಜನರ ಮನೆ ಮನ ಮುಟ್ಟಿಸಿದ ಕೀರ್ತಿಗೆ ಅವರು ಭಾಜನರಾಗುತ್ತಾರೆ.

ಅಡ್ಡಬೂರೊಂಡೆ, ಜೋಕುಲು ಬಾಲೆಲು ಇವರ ತುಳು ಅನುವಾದಿತ ಕೃತಿಗಳು. ಶಿಮುಂಜೆ ಪರಾರಿ ಅವರ ನಿತ್ಯ ಆನಂದ ವಚನಗಳನ್ನು ರಚಿಸಿ ಅದನ್ನು ಪ್ರಕಟಿಸಿದ ಶಿಮುಂಜೆ ಅವರು ಅನುಭಾವದ ತಿರುಳನ್ನು ಅಭಿವ್ಯಕ್ತಿಗೊಳಿಸಿ ಕನ್ನಡ ಸಾಹಿತ್ಯದಲ್ಲಿ ಮುಕ್ತಕದ ಮೂಲಕ ಹೊಸ ಕ್ರಾಂತಿಯನ್ನು ಮಾಡಿದವರು.

ಸಾಹಿತ್ಯ, ಕಲೆ, ಮಾನವ ಜೀವನವನ್ನು ಉಜ್ವಲಗೊಳಿಸುವ ಕೆಲಸ ಮಾಡಬೇಕು. ತಾನು ರಚಿಸಿದ ಸಾಹಿತ್ಯ ತನಗೆ ತೃಪ್ತಿ ಆಗದಿದ್ದರೆ ಜನಸಾಮಾನ್ಯನಿಗೆ ತಲುಪಲು ಸಾಧ್ಯವೇ ಇಲ್ಲ ಎಂದು ನಂಬಿದವರು ಶಿಮುಂಜೆಯವರು. ಆದ್ದರಿಂದಲೇ ಅವರು ತನಗೆ ಇಷ್ಟವಾದ 'ಯಾನ್ ಪಣ್ಪಿನಿ ಇಂಚ' ಶೀರ್ಷಿಕೆಯ ಒಂದು ಸಾವಿರ ತುಳು ಚುಟುಕುಗಳನ್ನು ಬರೆದು ಅವುಗಳನ್ನು ಹತ್ತೇ ಸಂಪುಟಗಳಲ್ಲಿ ಮುಂಬಯಿಯ ಹದಿಮೂರು ಜಾತೀಯ ಸಂಸ್ಥೆಗಳ ಮೂಲಕ ಕಿರುಹೊತ್ತಗೆಗಳಾಗಿ ಮುದ್ರಿಸಿ ತುಳು ಬಾಂಧವರಿಗೆ ಧರ್ಮಾರ್ಥವಾಗಿ ಹಂಚುವ ವಿಶಿಷ್ಟವಾದ ಯೋಜನೆಯನ್ನು ಹಾಕಿದರು.

ಇದರಲ್ಲಿ ಸಫಲತೆಯನ್ನು ಪಡೆದು ಪುಸ್ತಕ ಪ್ರಕಟಣೆಯ ಇತಿಹಾಸದಲ್ಲಿಯೇ ಅಭಿಮಾನ ಪಡುವ ಕಾರ್ಯ ಮಾಡಿದರು. ತುಳು ಸಾಹಿತ್ಯವನ್ನು ಜೀವಂತವಾಗಿರಿಸಲು ಅವರು ಪ್ರಾಂಜಲ ಮನಸ್ಸಿನಿಂದ ಸಾಹಿತ್ಯಿಕ ಪರಿಚಾರಿಕೆಯನ್ನು ನಡೆಸಿಕೊಂಡು ಬಂದಿರುವುದು ಗಮನೀಯ ಅಂಶ.

75ರ ಹರೆಯದ ಶಿಮುಂಜೆ ಪರಾರಿ ಶಿಕ್ಷಕರಾಗಿ ರಾತ್ರಿಶಾಲೆಯಲ್ಲಿ ಉಚಿತವಾಗಿ ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಯಾವುದೇ ಪ್ರಚಾರ ಪ್ರಶಸ್ತಿಗಳಿಗೆ ಹಂಬಲಿಸದೆ ಎಲೆಮರೆಯ ಕಾಯಿಯಾಗಿ ಸಾಂಸ್ಕೃತಿಕ ಪರಿಚಾರಿಕೆಗೈದ ಶಿಮುಂಜೆ ಪರಾರಿಯವರ ಜೀವನ ಸಾಧನೆಯನ್ನು ದಾಖಲಿಸುವ ಅಭಿನಂದನ ಗ್ರಂಥವೊಂದನ್ನು ತರಲು ನಿಶ್ಚಯಿಸಲಾಗಿದೆ. ಈ ದೃಷ್ಟಿಯಿಂದ ಗೌರವಗ್ರಂಥವೊಂದನ್ನು ತರಲು ನಿಶ್ಚಯಿಸಲಾಗಿದ್ದು, ಗೌರವಗ್ರಂಥ ಮಂಡಳಿಯೊಂದನ್ನು ರಚಿಸಲಾಗಿದೆ. ಪ್ರಧಾನ ಸಂಪಾದಕರಾಗಿ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ ಅವರು ಮಾರ್ಗದರ್ಶನ ಮಾಡಲಿದ್ದಾರೆ. ಈ ಗ್ರಂಥವು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕರಾದ ಡಾ.ಪೂರ್ಣಿಮಾ ಸುಧಾಕರ ಶೆಟ್ಟಿ ಅವರ ಸಂಪಾದಕತ್ವದಲ್ಲಿ ಹೊರಬರಲಿದೆ. ಸಂಪಾದಕ ಮಂಡಳಿಯಲ್ಲಿ ಹಿರಿಯ ವಿಜ್ಞಾನಿ, ಸಾಹಿತಿ ಡಾ. ವ್ಯಾಸರಾವ್ ನಿಂಜೂರು, ಹಿರಿಯ ಸಾಹಿತಿ ಬಿ.ಎಸ್.ಕುರ್ಕಾಲ್, ಪೇತ್ರಿ ವಿಶ್ವನಾಥ ಶೆಟ್ಟಿ, ಡಾ.ಕರುಣಾಕರ ಶೆಟ್ಟಿ, ಪೇಟೆಮನೆ ಪ್ರಕಾಶ್ ಶೆಟ್ಟಿ, ಜಿ.ಪಿ.ಕುಸುಮ, ಎಸ್.ಕೆ.ಸುಂದರ್ ಅವರು ಸಹಕರಿಸಲಿದ್ದಾರೆ.

ಶಿಮುಂಜೆ ಪರಾರಿಯವರನ್ನು ಹತ್ತಿರದಿಂದ ಬಲ್ಲ ಅವರ ಅಭಿಮಾನಿಗಳು, ಶಿಷ್ಯಂದಿರು, ಸಾಹಿತ್ಯಾಭಿಮಾನಿಗಳು ಎರಡು ಪುಟಗಳ ಮಿತಿಯಲ್ಲಿ ಶಿಮುಂಜೆ ಪರಾರಿ ಅವರ ಜೀವನ ಸಾಧನೆಯನ್ನು ಸ್ಮರಿಸುವ ಲೇಖನಗಳನ್ನು ಬರೆದು ಈ Dr. Poornima Sudhakar Shetty. Asst Prof, kannada Department, 1st Floor, Ranade Bhavan, Vidyanagari, Santacruz, mumbai-400098 F ವಿಳಾಸಕ್ಕೆ ಅಥವಾ kannadadepartment@gmail.com ಮಿಂಚಂಚೆಯ ಮುಖೇನ ಕಳುಹಿಸಬಹುದು.

ಶಿಮುಂಜೆ ಪರಾರಿ ಅವರ ಸಾಹಿತ್ಯ ಸಂಭ್ರಮ ಕಾರ್ಯಕ್ರಮವು ಫೆಬ್ರವರಿ ತಿಂಗಳ ಅಂತ್ಯದಲ್ಲಿ ವಿಶ್ವವಿದ್ಯಾಲಯದಲ್ಲಿ ನಡೆಯಲಿದ್ದು ಈ ಸಂದರ್ಭದಲ್ಲಿ ಅವರ ಅಭಿಮಾನಿಗಳು 1 ಲಕ್ಷ ರೂಪಾಯಿ ಹಮ್ಮಿಣಿಯನ್ನು ಅರ್ಪಿಸಬೇಕೆಂದು ನಿರ್ಧರಿಸಲಾಗಿದ್ದು ಆರ್ಥಿಕವಾಗಿ ಈ ಕಾರ್ಯಕ್ರಮದಲ್ಲಿ ಸಹಕರಿಸಬಯಸುವವರು ಅಭಿನಂದನ ಸಮಿತಿಯ ಕಾರ್ಯದರ್ಶಿ ಪೇತ್ರಿ ವಿಶ್ವನಾಥ ಶೆಟ್ಟಿ(9892602314), ಡಾ. ಕರುಣಾಕರ ಶೆಟ್ಟಿ (9869057913), ಪೇಟೆಮನೆ ಪ್ರಕಾಶ್ ಶೆಟ್ಟಿ (9892435643) ಎಸ್. ಕೆ. ಸುಂದರ್(9820456306) ಇವರನ್ನು ಸಂಪರ್ಕಿಸಬಹುದು.

**ಜೀವಿ ವಚನ**

## ಶಿಕ್ಷಾ

1

ಮೊದಲಿನ ಕಾಲದಲಿ??ಶಿಕ್ಷಾ ಎಂದರೆ ಶಿಕ್ಷಣವಾಗಿತ್ತು
ಶಿಕ್ಷಣವನ್ನು ಶಿಕ್ಷಾಶಾಸ್ತ್ರವೆಂದೇ ಕರೆಯಲಾಗುತ್ತಿತ್ತು
ಇಂದಿನ ಕಾಲದಲ್ಲಿ ಶಿಕ್ಷಣವೆಲ್ಲ ಶಿಕ್ಷೆಯಾಗಿಬಿಟ್ಟಿದೆ
ಶಾಲೆಗಳು ಕಾರಾಗೃಹಗಳಾಗಿವೆ, ಎಂಥ ವಿಪರ್ಯಾಸ?

2

ಇಂದಿನ ಶಿಕ್ಷಣ, ಶಾಲೆಗಳು ಮತ್ತು ಹಣ ಅಂತಸ್ತು ಅವಲಂಬಿಸಿವೆ
ಅದೇ ಶಿಕ್ಷಣಕ್ಕೆ, ಸ್ಕೂಲು ಬೇರೆಯಾದರೆ, ಹೆಚ್ಚು ಹಣ ತೆರಬೇಕು
ಹೆಸರಿಗೆ ಬೆಲೆ ಇದೆ, ವಿದ್ಯೆಗೆ ಬೆಲೆಯಿಲ್ಲ, ಸ್ಥಾನಕ್ಕೆ ಬೆಲೆಯಿದೆ
ಮಾನಕ್ಕೆ ಬೆಲೆಯಿಲ್ಲ, ಶಿಕ್ಷಣದ ಫಲ ವಿಷಯಸಂಗ್ರಹ, ಜ್ಞಾನವಲ್ಲ.

3

ಹಣಗಳಿಸುವ ತಂತ್ರ ಹೇಳಿಕೊಡುವುದು ಆಧುನಿಕ ಶಿಕ್ಷಣಪದ್ಧತಿ
ಅದರಲ್ಲಿ ನೀತಿಗೆ ಕವಡೆಯ ಕಿಮ್ಮತ್ತಿಲ್ಲ, ಪರಂಪರೆಗೆ ಗೌರವವಿಲ್ಲ
ಪಶ್ಚಿಮಕ್ಕೆ ತಿರುಗಬೇಕು, ಅಲ್ಲಿ ಸೂರ್ಯೋದಯ ಎಂದರೆ ನಂಬಬೇಕು
ಹಳೆಯದೆಲ್ಲ ಸತ್ತಿದೆ ಅವರಿಗೆ, ಸಂಸ್ಕೃತವು ಮೃತಭಾಷೆ ಪರರಿಗೆ.

4

ಬರಿ ಸಾಲದಿಂದ ಸೌಧ ಕಟ್ಟುವುದು ಎಂದರೆ ಎಷ್ಟು ದಿನದ ಮೋಜು?
ಉಳಿತಾಯ ಶೂನ್ಯ, ಸಾಲ ಮಾನ್ಯ, ಅನ್ಯರ ಶೋಷಣೆಯೆ ನೀತಿ–ಧರ್ಮ
ಪೊಳ್ಳು ಅರ್ಥಶಾಸ್ತ್ರ, ಅಂಕಿಸಂಖ್ಯೆಗಳೆಲ್ಲ ಆಗಿವೆ ಸುಳ್ಳುಸಾಕ್ಷಿಯ ತಂತ್ರ
ಪ್ರಗತಿಯೋ, ಅಧೋಗತಿಯೋ, ದೇವನೇ ಬಲ್ಲ, ಇದು ದೈತ್ಯ ರಾಜ್ಯ.

–ಡಾ। 'ಜೀವಿ' ಕುಲಕರ್ಣಿ

# ಜಯಂತರ ಕಥಾ ಜಗತ್ತಿಗೊಂದು ಪ್ರವೇಶ

| ಜಯಂತ ಕಾಯ್ಕಿಣಿಯವರ ಕಥನಾವರಣ | |
|---|---|
| ಲೇಖಕಿ | : ಡಾ.ಮಮತಾ ರಾವ್ |
| ಪ್ರಕಾಶನ | : ಅಂಕಿತ ಪುಸ್ತಕ |
| ಬೆಲೆ | : 150 ರೂ |

ನಾನು ಅಪ್ಪಟ ಮುಂಬಯಿಕರ್. ಆದರೆ ಮುಂಬಯಿಯಲ್ಲಿದ್ದುಕೊಂಡೇ ದೈನಂದಿನ ಬದುಕಿನಲ್ಲಿ ನನ್ನ ಕಂಗಳಿಗೆ ಗೋಚರಿಸದೇ ಇದ್ದ ಸೂಕ್ಷಾತಿಸೂಕ್ಷ್ಮ ವಿಷಯಗಳತ್ತ, ಅಸಾಮಾನ್ಯತೆಯತ್ತ ಗಮನ ಸೆಳೆದು, ಸುತ್ತಮುತ್ತ ನೋಡುವ ನನ್ನ ದೃಷ್ಟಿಕೋನವನ್ನೇ ಬದಲಾಯಿಸಿದ್ದು ಮಾತ್ರವಲ್ಲ, ನನ್ನ ಭಾವನಾಲೋಕವನ್ನು ಪುನಶ್ಚೇತರಿಸಿದ್ದು ಜಯಂತ ಕಾಯ್ಕಿಣಿಯವರ ಕಥೆಗಳು ಎಂದು ತಮ್ಮ ಕೃತಿಯ ಮುನ್ನುಡಿಯಲ್ಲಿ ಹೇಳಿಕೊಂಡಿರುವ ಡಾ.ಮಮತಾ ರಾವ್‌ರವರು, ಜಯಂತರ ಸಮಗ್ರ ಸಣ್ಣ ಕತೆಗಳನ್ನು ಓದಿ, ಕತೆಗಳ ಅಂತರಂಗದೊಳಗೆ ಪ್ರವೇಶಿಸಿ, ಅಲ್ಲಿರುವ ಪ್ರತಿಯೊಂದು ಪಾತ್ರವನ್ನೂ ವಿಶ್ಲೇಷಿಸಿ, ಅವುಗಳನ್ನು ವಿಮರ್ಶಿಸಿರುವ ಪರಿ ನಿಜಕ್ಕೂ ಅತಿಶಯವಾಗಿದೆ. ಮುಂಬಯಿ ವಿಶ್ವವಿದ್ಯಾಲಯದಿಂದ "ಮುಂಬಯಿ ಕನ್ನಡ ಕಥಾ ಸಾಹಿತ್ಯ" ಎಂಬ ಸಂಶೋಧನಾ ಪ್ರಬಂಧಕ್ಕೆ ಡಾಕ್ಟರೇಟ್ ಪಡೆದಿರುವ ಮಮತಾರವರು "ಗಿರೀಶ್ ಕಾರ್ನಾಡರ ನಾಟಕಗಳಲ್ಲಿ ಸ್ತ್ರೀ" ಮತ್ತು "ಕೈಲಾಸಾಧಿಪತಿಯ ಮನೆಯಂಗಳದಲ್ಲಿ" ಕೃತಿಯನ್ನು ರಚಿಸಿ ಮುಂಬಯಿಯ ಸಾರಸ್ವತ ಲೋಕದಲ್ಲಷ್ಟೇ ಅಲ್ಲ, ತಮ್ಮ ಉತ್ತಮ ವಿಮರ್ಶಾ ಬರಹಗಳಿಂದ ಕರ್ನಾಟಕದ ಸಾಹಿತ್ಯಪ್ರಿಯರ ಮನಸ್ಸನ್ನೂ ಗೆದ್ದಿದ್ದಾರೆ. ಈಗ ಮುಂಬಯಿಯನ್ನು ಬಿಟ್ಟು ಬೆಂಗಳೂರಿನಲ್ಲಿ ನೆಲೆಸಿರುವ, ಮುಂಬಯಿಯ ಸಾಮಾನ್ಯನ ಬದುಕನ್ನು ಅಸಮಾನ್ಯ ರೀತಿಯಲ್ಲಿ ಓದುಗರಿಗೆ ಪರಿಚಯಿಸಿದ ಜಯಂತರವರನ್ನು ಮಮತಾರವರು "ಜಯಂತ ಕಾಯ್ಕಿಣಿಯವರ ಕಥನಾವರಣ" ಕೃತಿಯಲ್ಲಿ, ಜಯಂತರು ಕಂಡ ಮುಂಬಯಿಯನ್ನು ತಮ್ಮ ಕಂಗಳಿಂದಲೂ ವೀಕ್ಷಿಸಿ, ಅವರ ಅನುಭವಗಳೊಳಗೆ ತಾವೂ ಪ್ರವೇಶಿಸಿ ರೂಪಕ ಸರದಾರ ಜಯಂತರ ಕತೆಗಳ ರಸಾಸ್ವಾದನೆಯನ್ನು ಓದುಗರಿಗೆ ನೀಡಿದ್ದಾರೆ.

ಜಯಂತರದ್ದು ಬಹುಮುಖಿ ಪ್ರತಿಭೆಯ ವ್ಯಕ್ತಿತ್ವ. ಪ್ರಾರಂಭದಲ್ಲಿ ಕವಿಯಾಗಿ ಗುರುತಿಸಿಕೊಂಡ ಕಾಯ್ಕಿಣಿಯವರು ಕಾಲಕ್ರಮೇಣ ಕತೆಗಾರರಾಗಿ, ನಾಟಕಕಾರರಾಗಿ, ಅಂಕಣಕಾರರಾಗಿ, ಅನುವಾದಕರಾಗಿ, ಸಂಪಾದಕರಾಗಿ, ದೂರದರ್ಶನದಲ್ಲಿ ಸಂದರ್ಶಕರಾಗಿ, ತೀರ್ಪುಗಾರರಾಗಿ, ಚಲನಚಿತ್ರ ಕ್ಷೇತ್ರದಲ್ಲೂ ಕೈಯಾಡಿಸಿ ಎಲ್ಲರಿಗೂ ಚಿರಪರಿಚಿತರಾದವರು. ನವ್ಯ ಹಾಗೂ ಬಂಡಾಯದ ಪ್ರಭಾವದಿಂದ ತಮ್ಮನ್ನು ಕಳಚಿಕೊಳ್ಳುತ್ತಾ ತಮ್ಮದೇ ಆದ ಭಿನ್ನ ಶೈಲಿಯಲ್ಲಿ ಬರೆಯಲಾರಂಭಿಸಿದ ಕೆಲವೇ ಕೆಲವು ಸಾಹಿತಿಗಳಲ್ಲಿ ಜಯಂತರು ಪ್ರಮುಖರು. ತಮ್ಮ ಕತೆಗಳಿಗಾಗಿ ವಸ್ತುಗಳ ಹುಡುಕಾಟ ಅವರ ಜಾಯಮಾನದಲ್ಲೇ ಇಲ್ಲ. ನಿತ್ಯ ಬದುಕಿನ ಘಟನೆಗಳಂತೆಯೇ ತಮ್ಮ ಸುತ್ತುಮುತ್ತಿನ ಸಾಮಾನ್ಯ ಹಾಗೂ ಮಧ್ಯಮ ವರ್ಗದ ಜನರ ಬದುಕನ್ನು ಗಮನಿಸುತ್ತಾ ತಮ್ಮ ಗಮನ ಸೆಳೆದ ವಿಷಯಗಳನ್ನು ದಾಖಲಿಸುವುದ್ದಷ್ಟೇ ಅವರ ಉದ್ದೇಶ. ಸಾಮಾನ್ಯ ಜನರನ್ನು ಗಮನಿಸುವ, ಅವರ ಜೀವನವನ್ನು ಅರಿಯುವ ಅಪಾರ ಆಸಕ್ತಿ ಅವರಲ್ಲಿದೆ. ದಿನನಿತ್ಯದ ಬದುಕಿನಲ್ಲಿ ಇತರರು ಕಂಡೂ ಕಾಣದ್ದನ್ನು ಅವರಿಗೆ ತಿಳಿಸಬೇಕೆನ್ನುವ ತವಕ ಜಯಂತರ ಒಟ್ಟು ಬರಹದಲ್ಲಿ ಎದ್ದು ಕಾಣುವ ವಿಶೇಷತೆ. ಈ ಸಹಜತೆ, ಸರಳತೆಗಳೇ ಅವರ ಕಥನ ಶೈಲಿಗೆ ಭಿನ್ನವಾದ ಮೆರುಗನ್ನು ನೀಡಿವೆ ಎನ್ನುತ್ತಾರೆ ಮಮತಾರವರು. ಜಯಂತರವರು ರಚಿಸಿರುವ 71 ಸಣ್ಣಕತೆಗಳು 7 ಕಥಾಸಂಕಲನದಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ಸುಮಾರು ಇಪ್ಪತ್ತರಷ್ಟು ಕತೆಗಳು ಗೋಕರ್ಣದ ಪರಿಸರಕ್ಕೆ ಸಂಬಂಧ ಪಟ್ಟ ಕತೆಗಳು ಮತ್ತು ಉಳಿದ ಕತೆಗಳು ಮುಂಬಯಿಯ ಕತೆಗಳು ಎಂದು ಮಮತಾರವರು ವಿಂಗಡಿಸಿದ್ದಾರೆ. ಈ ಕೃತಿಯಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. 1. ಪ್ರಸ್ತಾವನೆ 2. ಜಯಂತರ ಬದುಕು ಮತ್ತು ಬರಹ 3. ಜಯಂತರೊಂದಿಗೆ ಆತ್ಮೀಯ ಸಂವಾದ 4. ಗೋಕರ್ಣದ ಹಿನ್ನಲೆಯಲ್ಲಿ ಬರೆದ ಕತೆಗಳು 5. ಮುಂಬಯಿಯ ಕತೆಗಳು 6. ಜಯಂತರ ಕತೆಗಳಲ್ಲಿ ನಗರ ಜಾನಪದ 7. ಜಯಂತರ ಕತೆಗಳ ಅನನ್ಯತೆ

ಜಯಂತರ ಕತೆಗಳನ್ನು ಒಟ್ಟಿಗೆ ಸಮೀಕ್ಷಿಸಿ, ಅವರ ಜೀವನ ದರ್ಶನವನ್ನು, ಅವರ ಕತೆಗಳ ಕಾಣ್ಕೆಯನ್ನು, ಅವರು ಗುರುತಿಸುವ ಅನಾಮಿಕ ಸಂಬಂಧಗಳನ್ನು ಸಹೃದಯರಿಗೆ ಪರಿಚಯಿಸುವ ಹಾದಿಯಲ್ಲಿ ಇಟ್ಟ ಮೊದಲ ಹೆಜ್ಜೆಯಿದು ಎಂದು ತಮ್ಮ ಪ್ರಸ್ತಾವನೆಯಲ್ಲಿ ಮಮತಾರವರು ಹೇಳಿದ್ದಾರೆ. ಗೋಕರ್ಣದಲ್ಲಿ ಹೆಸರಾಂತ ಸಾಹಿತಿ ಗೌರೀಶ ಕಾಯ್ಕಿಣಿಯವರ ಮಗನಾಗಿ ಜನಿಸಿ, ಚಿಕ್ಕಂದಿನಿಂದಲೂ ಎಲ್ಲಾ ಹಿರಿಯ ಸುಪ್ರಸಿದ್ಧ ಸಾಹಿತಿಗಳ ಸಹವಾಸದಲ್ಲಿ ಬೆಳೆದು, ಗೋಪಾಲ ಕೃಷ್ಣ ಅಡಿಗರ ಸಾಕ್ಷಿ' ಪತ್ರಿಕೆಯ ಬರಹಗಳಿಂದ ಪ್ರೇರಿತರಾಗಿ ಕವನಗಳನ್ನು ಬರೆಯುತ್ತಾ ಕನ್ನಡ ಸಾಹಿತ್ಯಲೋಕಕ್ಕೆ ಪದಾರ್ಪಣೆ ಮಾಡಿ, ಬಹು ಬೇಗನೆ ಕತೆ ಬರೆಯಲು ಪ್ರಾರಂಭಿಸಿ, ಮುಂದೆ ಮುಂಬಯಿಯಲ್ಲಿ ಕಳೆದ 23 ವರ್ಷಗಳು ಅವರ ಅನುಭವ ಕ್ಷಿತಿಜವನ್ನು ವಿಸ್ತರಿಸಿದ ಪರಿಯನ್ನು ಜಯಂತರ ಬದುಕು ಬರಹ ಅಧ್ಯಾಯದಲ್ಲಿ ಸವಿವರವಾಗಿ ನೀಡಿದ್ದಾರೆ. ಮೂರನೇ ಅಧ್ಯಾಯದಲ್ಲಿ ಜಯಂತರೊಂದಿಗೆ ನಡೆಸಿದ ಸಂದರ್ಶನ ಬಹಳ ಆತ್ಮೀಯವಾಗಿದೆ. ಜಯಂತರು ಸಾಹಿತ್ಯ ಲೋಕದಲ್ಲಿ ಬೆಳೆದು ಬಂದ ಬಗೆಯನ್ನು ಇಲ್ಲಿ ಚರ್ಚಿಸಿದ್ದಾರೆ.

✍ ರಮಾ ಉಡುಪ
ಸಹ ಸಂಶೋಧಕಿ, ಮುಂಬಯಿ ವಿ.ವಿ.

ಗೋಕರ್ಣದ ಹಿನ್ನಲೆಯಲ್ಲಿ ಬರೆದ ಕತೆಗಳ ವಿಷಯವನ್ನು 1.ಪರಿಸರ ಮುಖ್ಯವಾಗಿ ಸಮುದ್ರ 2.ನೈತಿಕ ಪ್ರಜ್ಞೆಯನ್ನು ಪ್ರತಿನಿಧಿಸುವ ಮಾಸ್ತರರು 3. ಜೀವನದಲ್ಲಿ ಕಂಡು ಕೊಂಡ ಮೌಲ್ಯಗಳು-ಕಟು ಸತ್ಯಗಳು ಮತ್ತು 4.ಬದುಕಿನಲ್ಲಿ ಪಾಠ ಕಲಿಸಿದ ಅನುಭವಗಳು ಎಂದು ವಿಂಗಡಿಸಿದ್ದಾರೆ. ಗೋಕರ್ಣದಲ್ಲಿ ಕಣ್ಣು ಹಾಯಿಸಿದಲ್ಲೆಲ್ಲಾ ಕಾಣುವ ಸಮುದ್ರ ಜಯಂತರಿಗೆ ಆಪ್ತವಾದ ಸ್ಥಳ. ಹಾಗಾಗಿ ಅವರು ಗೋಕರ್ಣದ ಹಿನ್ನಲೆಯಲ್ಲಿ ಬರೆದ ಕತೆಗಳಲ್ಲಿ ಕಡ್ಡಾಯವಾಗಿ ಬರುವ ಸಮುದ್ರ ಅವರ ಮುಂಬಯಿ ಕತೆಗಳಲ್ಲೂ ಸಹಜವಾಗಿ ನುಸುಳಿದೆ ಎಂದು ಮಮತಾವರು ಗುರುತಿಸಿದ್ದಾರೆ. ಬದುಕಿನ ಪಾಠ ಕಲಿಸುವ ಸಮುದ್ರದಂತೆಯೇ, ಸಮಸ್ಯೆಗಳನ್ನು ಪರಿಹರಿಸಲು, ಸನ್ಮಾರ್ಗದ ದಾರಿ ದೀಪವಾಗಲು ಪ್ರತಿ ಹೆಜ್ಜೆಯಲ್ಲಿ ಭೇಟಿಯಾಗುವ ಊರಿನ ಆದರ್ಶಪ್ರಾಯರಾದ ಮಾಸ್ತರರು ಜಯಂತರ ಕತೆಗಳಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತಾರೆ. ಜಯಂತರ ಕತೆಗಳಲ್ಲಿ ಕಾಣಿಸುವ ಮಾಸ್ತರರು ನೈತಿಕತೆಯ ಸಂರಕ್ಷಕರು. ಜಯಂತರ ಪಾಲಿಗೆ ಮಾಸ್ತರರು ಪಠ್ಯವನ್ನಷ್ಟೇ ಕಲಿಸಲು ಸೀಮಿತರಾದವರಲ್ಲ. ಬದುಕಿನ ಪಾಠವನ್ನು, ಮಾನವೀಯತೆಯನ್ನು ತಿಳಿ ಹೇಳಿದವರು. ಮೂಲತಃ ಕವಿಯಾಗಿದ್ದ ಜಯಂತರನ್ನು ಕತೆಗಾರರನ್ನಾಗಿ ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿದ ಕತೆ ಇದ್ದಾಗ-ಇದ್ದಾಂಗ ಗೋಕರ್ಣದ ಹಿನ್ನಲೆಯಲ್ಲಿ ಬರೆದ ಕತೆ. ವ್ಯಕ್ತಿಯಿಂದ ಸಮಷ್ಠಿಯ ಸಮಸ್ಯೆಗಳತ್ತ ಮುಖಮಾಡುವ ಲಕ್ಷಣಗಳನ್ನು ಹೊತ್ತ ಈ ಕತೆಯು ಜಯಂತರು ಪ್ರಾರಂಭದಲ್ಲಿ ಬರೆದ ಬಹು ಮಹತ್ವಾಕಾಂಕ್ಷೆಯ ಕತೆಯಿದೆಂದು ಮಮತಾರವರ ಅಭಿಪ್ರಾಯ. ಜಯಂತರ ಎರಡನೇ ಕಥಾಸಂಕಲನ "ಗಾಳ". ಅವರ ಪ್ರಥಮ ಕಥಾಸಂಕಲನ "ತೆರೆದಷ್ಟೇ ಬಾಗಿಲು"ದಲ್ಲಿ ಸೇರ್ಪಡೆಯಾಗದೆ ಉಳಿದ ಕತೆಗಳು ಈ

ಕಥಾಸಂಕಲನದಲ್ಲಿ ಪ್ರಕಟಗೊಂಡಿದೆ. ಈ ಕತೆಗಳೆಲ್ಲವೂ ಗೋಕರ್ಣದ ಹಿನ್ನಲೆಯಲ್ಲೇ ಬರೆಯಲ್ಪಟ್ಟವುಗಳು. ಪ್ರಾರಂಭದಲ್ಲಿ ಜಯಂತರ ಮೇಲಾದ ನವ್ಯದ ಪ್ರಭಾವವು ಈ ಕಥಾಸಂಕಲನದ ಎಲ್ಲಾ ಕತೆಗಳಲ್ಲಿ ಎದ್ದು ಕಾಣುತ್ತವೆ ಎನ್ನುತ್ತಾರೆ ಮಮತಾರವರು. ಗೋಕರ್ಣ, ಬಂಕಿಕೊಡ್ಲ ಮತ್ತು ಕೋಟಿತೀರ್ಥ ಇವು ಜಯಂತರ ಜೀವನದ ಅವಿಭಾಜ್ಯ ಅಂಗ. ಆದರೂ ಅವರು ಹುಟ್ಟೂರಿನ ಹಿನ್ನಲೆಯಲ್ಲಿ ಬರೆದ ಕತೆಗಳ ಸಂಖ್ಯೆ ಕಡಿಮೆ ಅಷ್ಟೇ ಅಲ್ಲದೆ ಅವರು ಎತ್ತಿ ಕೊಳ್ಳುವ ವಸ್ತುಗಳು ಕೂಡಾ ಇತರರಿಗಿಂತ ಭಿನ್ನವಾದುದು.

ಜಯಂತರ ಹೆಚ್ಚಿನ ಕತೆಗಳು ಮುಂಬಯಿಯ ಹಿನ್ನಲೆಯುಳ್ಳವು. 23 ವರ್ಷ ಮುಂಬಯಿಯ ವಿವಿಧ ಭಾಗದಲ್ಲಿ ವಾಸವಾಗಿದ್ದ ಜಯಂತರಿಗೆ, ಇಲ್ಲಿಯ ಬದುಕು ಅವರ ಅನುಭವ ಕ್ಷಿತಿಜವನ್ನು ವಿಸ್ತರಿಸಿತು. ಅವರ ಕತೆ ಕವನಗಳಿಗೆ ಹೊಸ ದಿಕ್ಕನ್ನು ತೋರಿಸಿತು. ಹೊಸ ಶೈಲಿ, ಹೊಸ ಭಾಷೆ, ಹೊಸ ವಸ್ತುಗಳನ್ನೊಳಗೊಂಡ ಜಯಂತರ ಸಾಹಿತ್ಯ ಅನನ್ಯತೆಯನ್ನು ಪಡೆಯಿತು. ಕನ್ನಡಕ್ಕೆ ನಗರ ಸಂವೇದನೆಯನ್ನು ವಿಶಿಷ್ಟ ರೀತಿಯಿಂದ ಪರಿಚಯಿಸಿತು ಎಂದು ಮಮತಾರವರು ದಾಖಲಿಸಿದ್ದಾರೆ. ಅವರ ಪ್ರಕಾರ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಂಕೀರ್ಣವಾದ ನಗರದ ಸಂವೇದನೆಯನ್ನು ವಸ್ತು ನಿಷ್ಠೆಯಿಂದ ಅದರೆಲ್ಲಾ ವೈವಿಧ್ಯಗಳೊಂದಿಗೆ ಅತ್ಯಂತ ಕಲಾತ್ಮಕವಾಗಿ, ನೈಜವಾಗಿ ಅಷ್ಟೇ ಭಾವಪೂರ್ಣವಾಗಿ ಚಿತ್ರಿಸಿದವರು ಎನ್ನುವ ಹೆಗ್ಗಳಿಕೆ ಜಯಂತರದ್ದು. ಮುಂಬಯಿಯ ಏಕತಾನತೆಯ ಹಾಗೂ ಯಾಂತ್ರಿಕತೆಯ ನಡುವಿನಲ್ಲಿಯೂ ನಲುಗದೆ ಉಸಿರಾಡುತ್ತಿರುವ ಮಾನವೀಯ ಸಂಬಂಧಗಳನ್ನು, ಅಪರಿಚಿತ ಮುಖಗಳ ಹಿಂದಿರುವ ಹೃದಯವಂತಿಕೆಯನ್ನು, ಇಲ್ಲಿಯ ಕಾಂಕ್ರೀಟು ಧೂಳಿನಡಿಯಲ್ಲಿ ಕಳೆದು ಹೋಗದ ಪ್ರೀತಿಯ ಸೆಲೆಗಳನ್ನು, ಶೋಷಣೆಗಳ ಚಕ್ರದಡಿ ಸಿಲುಕಿಯೂ ನಲುಗದ ಆತ್ಮವಿಶ್ವಾಸವನ್ನು, ಅನಿರೀಕ್ಷಿತ ಅಘಾತಗಳ ತಾಪಕ್ಕೆ ಕರಗಿ ಆವಿಯಾಗದ ಆಶೆ ಆಕಾಂಕ್ಷೆಗಳನ್ನು ಜಯಂತರಂತೆ ಗುರುತಿಸಿ ಸಜೀವವಾಗಿ ಚಿತ್ರಿಸಿ ಸಹೃದಯರನ್ನು ತಟ್ಟಿದ ಕತೆಗಾರರು ಕನ್ನಡ ಸಾಹಿತ್ಯದಲ್ಲಿ ಇನ್ನೊಬ್ಬರಿಲ್ಲ.

ಕಾಯ್ಕಿಣಿಯವರ ಮುಂಬಯಿಯ ಕತೆಗಳಲ್ಲಿ ಕಂಡು ಬರುವ ವಸ್ತುಗಳನ್ನು 1.ಗೆಳೆತನ 2.ಪುಟಾಣಿ ಲೋಕ 3.ಬದುಕಿನ ಪಯಣದಲ್ಲಿ ಭಿನ್ನ ಮಾರ್ಗದ ಶೋಧನೆ 4.ಸಾಮಾನ್ಯರ ಅಸಮಾನ್ಯ ಕತೆಗಳು 5. ನಗರ ಸಂವೇದನೆಯನ್ನು ಒಳಗೊಂಡ ವಿಶಿಷ್ಟವಾದ ಕತೆಗಳು ಎಂದು ವಿಂಗಡಿಸಿದ್ದಾರೆ. ಮುಂಬಯಿಯ ಬದುಕಿನ ಬಗ್ಗೆ ಹೇಳುತ್ತಾ ಜಯಂತ್‌ರವರು "ಮುಂಬಯಿಯನ್ನು ಪ್ರವಾಸಿಯಾಗಿ ನೋಡಿದವರಿಗೆ ಇಲ್ಲಿ ಬರೇ ಟ್ರಾಫಿಕ್, ಗಲೀಜು, ಧಾರಾವಿ, ಧೂಳು, ಬಿಸಿಲು, ಬೆವರು, ಗರ್ದಿ ಅಷ್ಟೇ ಕಾಣುತ್ತದೆ. ನನಗಂತೂ ಮುಂಬಯಿ ದೊಡ್ಡ ಕಾಯಕದ ಕೈಲಾಸ. ಮುಂಬಯಿ ಬಹುವಚನದ ನಗರವಾಗಿದ್ದೂ ಏಕವಚನದಲ್ಲಿ ಮಾತನಾಡುತ್ತದೆ. "ಕಾಯಕದಿಂದಾಗಿಯೇ ಈ ನಗರ ಜಾತಿ, ಮತ, ಧರ್ಮ, ಅಂತಸ್ತುಗಳ ಗೋಡೆಯನ್ನು ದಾಟುತ್ತದೆ" ಎನ್ನುತ್ತಾರೆ. ಜಯಂತರಿಗೆ ಅಪರಿಚಿತ ಮುಖಗಳನ್ನು ಪರಿಚಯಿಸಿಕೊಳ್ಳುವಲ್ಲಿ ಅವರ ಮನೋವ್ಯಾಪಾರಗಳಲ್ಲಿ ಅಪಾರ ಆಸಕ್ತಿ. ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ, ಯಾರೂ ಅಮುಖ್ಯರೂ ಅಲ್ಲ ಎನ್ನುವುದನ್ನು ತಮ್ಮ ಕತೆಗಳಲ್ಲಿ ಪ್ರತಿಪಾದಿಸುತ್ತಾ ಬಂದವರು ಇವರು. ಅವರ ಪ್ರಕಾರ "ಸಾಹಿತ್ಯ ಎಂದರೆ ಪರಿಚಿತರಲ್ಲಿ ಅಪರಿಚಿತವನ್ನು ಹಾಗೂ ಅಪರಿಚಿತದಲ್ಲಿ ಪರಿಚಿತವನ್ನು ಕಾಣುವುದು. ಇಲ್ಲಿ ಒಂದು ಹತ್ತು ವರ್ಷ ಇದ್ದರೆ ಪ್ರತಿಯೊಂದು ಹೊಸ ಮುಖವೂ ಅದರ ಕತೆ ಗೊತ್ತಾಗುವಂತಹ ಒಂದು ಸಂತೆಯ ಸಖ್ಯ ನಿಮ್ಮದಾಗುತ್ತದೆ"

ಜಯಂತರ ಕತೆಗಳಲ್ಲಿ ಮಮತಾರವರು ಗುರುತಿಸಿರುವಂತೆ ಸಣ್ಣ ಪುಟ್ಟ ಹಳ್ಳಿಗಳಿಂದ ರಂಗುರಂಗಿನ ಕನಸುಗಳನ್ನು ಹೊತ್ತು ಮುಂಬಯಿಗೆ ಓಡಿ ಬರುವವರು ಲೆಕ್ಕವಿಲ್ಲದಷ್ಟು ಮಂದಿ. ಅಂತಹ ಪಾತ್ರಗಳನ್ನೇ ಬಳಸಿ ಕಥೆಯಾಗಿಸುವಲ್ಲಿ ಜಯಂತರಿಗೆ ಆಕರ್ಷಣೆಯಿಲ್ಲ. ಅವರ ಆಸಕ್ತಿಯಿರುವುದು ಹೀಗೆ ಓಡಿ ಬಂದವರು ಎಷ್ಟರಮಟ್ಟಿಗೆ ಇಲ್ಲಿಯ ಬದುಕಿಗೆ ತಮ್ಮನ್ನು ಒಡ್ಡಿಕೊಂಡರು ಎನ್ನುವಲ್ಲಿ. ಅವರ ಸೂಕ್ಷ್ಮಗ್ರಾಹಿ ಕಣ್ಣುಗಳು ಕಾಣದ ವಸ್ತುಗಳು ಹಾಗೂ ಪಾತ್ರಗಳೇ ಇಲ್ಲವೇನೋ. ಸಿನಿಮಾಲೋಕದ ಮಿನುಗುತಾರೆಯರ ಹಿಂದಿರುವ ಸ್ಟಂಟ್ ಕಲಾವಿದರು, ಎಕ್ಸ್‌ಟ್ರಾಗಳು, ಸರ್ಕಸ್‌ನ ಜೋಕರ್‌ಗಳು, ಟ್ರೆಪೀಜ್ ಆರ್ಟಿಸ್ಟ್, ಮೃತ್ಯುಕೂಪದಲ್ಲಿ ಸೈಕಲ್ ನಡೆಸುವವರು, ಅಂಗವಿಕಲರು, ಭಂಗಾರು ದುಕಾನಿನಲ್ಲಿದ್ದು ಕನಸು ಕಾಣುವ ಮುಚ್ಚೀಮಿಯಾನಂತವರು, ರಾತ್ರಿ ರಸ್ತೆಬದಿಯಲ್ಲಿ ದಣಿದವರಿಗೆ ಹೊಟ್ಟೆ ತುಂಬಾ ಊಟ ನೀಡುವ ತಳ್ಳುಗಾಡಿಯವರು, ಚಹಾವಾಲಾಗಳು, ಥಿಯೇಟರ್‌ನಲ್ಲಿ ಕತ್ತಲಲ್ಲಿ ಬ್ಯಾಟರಿಯಿಂದ ಪ್ರಕಾಶ ಬೀರಿ ಸೀಟು ತೋರಿಸುವವರು, ಕೆಂಪು ದೀಪದ ಬೀದಿಯಲ್ಲಿರುವ ಪಂಜರದಂತಹ ಸಲಾಕೆ ಗೂಡುಗಳಲ್ಲಿ ಮೈಮಾರಿ ಬದುಕುವ ಹೆಣ್ಣು ಜೀವಿಗಳು, ರಸ್ತೆಬದಿಯ ಜೋಪಡಿಯಲ್ಲಿ ವಾಸಿಸುವ ಜನರು, ನಾಜೂಕಾಗಿ ಅನಾನಾಸು ಕೆತ್ತಿ ಬೇಡವಾದ ಭಾಗಗಳನ್ನು ಬಡಮಕ್ಕಳಿಗಾಗಿ ಕಾದಿರಿಸುವ ಮುದುಕ, ರಸ್ತೆಯಲ್ಲಿ ಚಿತ್ರಿಸಿದ ಸೀಮೆಸುಣ್ಣದ ಸಾಯಿಬಾಬಾನನ್ನು ಉಳಿಸಲು ಮಳೆ ನೀರಿಗೆ ನೆನೆಯುತ್ತಾ ಹೆಣಗಾಡುವ ಪುಟ್ಟ ಬಾಲಕಿ, ತನ್ನ ಅವಿವಾಹಿತ ಮಗಳ ಕನ್ಯತ್ವದ ದಾಖಲೆಯನ್ನು ಹಿಡಿದುಕೊಂಡು ಊರಿಡಿ ತಿರುಗುವ ಕನ್ಯಾಪಿತೃ, ಸಮಾಜದಲ್ಲಿ ತುಸು ಮೇಲ್ಮಟ್ಟ ಪಡೆದ ಕೂಡಲೇ ತನ್ನನ್ನು ದೂರ ಮಾಡುವವನ ಸೇವೆಯನ್ನು ನಿರ್ವಂಚನೆಯಿಂದ ಮಾಡುವ ರೂಮ್ ಪಾರ್ಟ್‌ನರ್, ಬಿಯರ್ ಬಾರ್‌ನಲ್ಲಿ ಕುಣಿಯುವ ಡಾನ್ಸ್ ಬಾಲೆಯರು, ರಿಕ್ಷಾ–ಟಾಕ್ಸಿ–ಟ್ರಕ್ಕ್ ಡ್ರೈವರ್‌ಗಳು ಹೀಗೆ ಪ್ರತಿಯೊಬ್ಬರೂ ಜಯಂತರ ಕತೆಗಳಲ್ಲಿ ಜೀವಂತಿಕೆಯಿಂದ ಮಿಂಚುತ್ತಾರೆ. ತಮ್ಮ ಕಣ್ಣಿಗೆ ಬೀಳುವ ಪ್ರತಿಯೊಬ್ಬನ ಮನಸ್ಸಿನ ಮೂಲಕ ಇಡಿಯ ಮನುಜ ಕುಲದ ಪಾಡನ್ನು ತಿಳಿಯುವ ದಾಹ. ಆದುದರಿಂದಲೇ ವಿಶಿಷ್ಟ ಭಾಷೆ ಮತ್ತು ರೂಪಕಗಳನ್ನೊಳಗೊಂಡ ನಗರ ಪ್ರಜ್ಞೆಯ ಕತೆಗಳನ್ನು ಬರೆಯುತ್ತಾ, ಆ ಮೂಲಕ ಕನ್ನಡಕ್ಕೆ ಮಹಾನಗರದ ಅಪರಿಚಿತ ಮುಖಗಳನ್ನು ಪರಿಚಯಿಸಿದ ಜಯಂತರು ಕನ್ನಡದ ಮಹಳ ಮಹತ್ವದ ಕತೆಗಾರರಾಗಿದ್ದಾರೆ. ಅವರ ಕತೆಗಳು ಒಂದು ದೊಡ್ಡ ಕೊಲಾಜ್ ಇದ್ದ ಹಾಗೆ. ಅದರಲ್ಲಿರುವ ಚಿತ್ರಗಳು ಅಸಂಖ್ಯಾತ. ಅದರಿಂದ ಹೊರ ಹೊಮ್ಮುವ ಭಾವಗಳು ಅಪರಿಮಿತ. ಒಮ್ಮೆ ಓದಿದರೆ ಸಾಕು ಅದರಲ್ಲಿರುವ ಸೂಕ್ಷ್ಮ ಸಂವೇದನೆ ಕಲ್ಲು ಹೃದಯವನ್ನು ಸಹ ತಟ್ಟದೆ ಇರಲಾರದು. ತನ್ನೊಳಗೆ ಸೆಳೆಯುವಂತಹ ಮಾಂತ್ರಿಕ ಶಕ್ತಿ ಜಯಂತರ ಕಥಾ ಜಗತ್ತಿಗಿದೆ ಎಂದು ಮಮತಾರವರು ಜಯಂತರ ಕತೆ ಹೇಳುವ ನೈಪುಣ್ಯವನ್ನು ಈ ಮಾತುಗಳಲ್ಲಿ ತೆರೆದಿಟ್ಟಿದ್ದಾರೆ.

ಜಯಂತರಿಗೆ ತಾವು ಬೆಳೆದು ಬಂದ ಪರಿಸರ, ಬಾಲ್ಯದಿಂದಲೇ ರಕ್ತಗತಗೊಳಿಸಿದ ಮಾನವ್ಯದ ಪಾಠ, ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಸಬೇಕೆಂಬ ಅದಮ್ಯ ಆಸೆ, ಯಾವ ಪರಿಯ ಅನುಭವಕ್ಕೂ ತೆರೆದುಕೊಳ್ಳ ಬೇಕೆನ್ನುವ ಮಗುವಿನ ಹಂಬಲ, ಕುತೂಹಲ, ಸ್ನೇಹಪರ ಮನೋಭಾವಗಳಿಂದಾಗಿ ಅತ್ಯಂತ ಭಿನ್ನವಾದ ಆಶಯಗಳನ್ನು ತಮ್ಮ ಕತೆಗಳ ಮೂಲಕ ನೀಡಲು ಸಾಧ್ಯವಾಯಿತು ಎಂದು ಜಯಂತರ ಅಸಾಧಾರಣ ಪ್ರತಿಭೆಯ ಬಗ್ಗೆ ಮಮತಾರವರು ಹೇಳುತ್ತಾರೆ. ಈ ಕೃತಿಯಲ್ಲಿ ಮಮತಾರವರು ಜಯಂತರ ಕತೆಗಳ ಪಾತ್ರಗಳಷ್ಟೇ ಅಲ್ಲ, ಜಯಂತರ ವ್ಯಕ್ತಿತ್ವದ ಬಗೆಯೂ ಬೆಳಕು ಚೆಲ್ಲಿದ್ದಾರೆ. ಅವರ ಕತೆಗಳ ಮೂಲಕ ಅವರನ್ನೂ ಅನಾವರಣಗೊಳಿಸಿರುವುದು ಮಮತಾರವರ ಪ್ರತಿಭೆಗೆ ಸಾಕ್ಷಿ. ವಿವೇಕ ಶಾನುಭಾಗರು ಕೃತಿಯ ಬೆನ್ನುಡಿಯಲ್ಲಿ ಹೇಳಿರುವಂತೆ ತನಗೆ ಕಂಡದ್ದಕ್ಕಿಂತಲೂ ಮಿಗಿಲಾದ್ದು ಇರಬಹುದೆನ್ನುವ ಸಾಧ್ಯತೆಯನ್ನು ಗುರುತಿಸುವ ಕೆಲಸವನ್ನು ಮಮತಾರವರು ಮಾಡಿದ್ದಾರೆ. ಜಯಂತರ ಕೃತಿಗಳಿಗೆ ಕರ್ನಾಟಕದ ವಿಮರ್ಶಕರು ನ್ಯಾಯ ಸಲ್ಲಿಸಿಲ್ಲ ಎನ್ನುವುದಕ್ಕೆ ಅಪವಾದವಾಗಿ ಮಮತಾರವರು "ಜಯಂತ ಕಾಯ್ಕಿಣಿಯವರ ಕಥನಾವರಣ"ದಲ್ಲಿ ಅತ್ಯುತ್ತಮ ವಿಮರ್ಶೆ ಬರೆದು "ಸೈ" ಎನಿಸಿಕೊಂಡಿದ್ದಾರೆ. ಲೇಖಕಿಯಿಂದ ಮತ್ತಷ್ಟು ವಿಮರ್ಶಾ ಕೃತಿಗಳು ಹೊರ ಬರಲಿ ಎಂದು ಹಾರೈಸುತ್ತೇನೆ.

# ಶ್ಯಾಮಲಾ ಮಾಧವ ಅವರ ಹೊಸಕೃತಿ 'ವಾಸ್ತವವಾದದ ಸಾಹಿತಿ ರಾಮಚಂದ್ರ ಉಚ್ಚಿಲ'

'ವಾಸ್ತವವಾದದ ಸಾಹಿತಿ ರಾಮಚಂದ್ರ ಉಚ್ಚಿಲ' ಶ್ಯಾಮಲಾ ಮಾಧವ ಅವರ ಲೇಖನಿಯಿಂದ ಹರಿದು ಬಂದಿರುವ ಕೃತಿ. ಕನ್ನಡ ಸಂಘ ಕಾಂತಾವರ ಇವರು ತಮ್ಮ ಸಂಘಕ್ಕೆ 25 ವರ್ಷಗಳು ತುಂಬಿದ ಸಂದರ್ಭದಲ್ಲಿ (15 ಎಪ್ರಿಲ್ 2001) ರಾಜ್ಯ ಮಟ್ಟದ ಸಾಹಿತ್ಯ ಸಂಸ್ಕೃತಿ ಸಮ್ಮೇಳನ ಮತ್ತು ಅದರ ಸವಿನೆನಪಿಗಾಗಿ ದಕ್ಷಿಣ ಕನ್ನಡದ ಶತಮಾನದ ಕಾವ್ಯ (1900-2000) ಎಂಬ ಇನ್ನೊಂದು ಬೃಹತ್ ಗ್ರಂಥವನ್ನು ಪ್ರಕಟಿಸಲು ಸಂಘವು ಮನಸ್ಸು ಮಾಡಿತು. ಮುಂದೆ ಸಂಘಕ್ಕೆ ಮೂವತ್ತು ತುಂಬಿದ ಸವಿನೆನಪಿಗಾಗಿ ಮೂವತ್ತು ಮಂದಿ ಸಾಧಕರ ಪರಿಚಯ ಮಾಡುವ ಉದ್ದೇಶವಿದ್ದರೂ ಮೊದಲ ಕುಸುಮ ಪದ್ಮಭೂಷಣ ಡಾ. ವೀರೇಂದ್ರ ಹೆಗ್ಗಡೆಯವರು ಕೃತಿ ಬೆಳಕು ಕಂಡ ನಂತರ ನೂರು ಕೃತಿ ಪ್ರಕಟಿಸುವ ಯೋಜನೆ ಹಾಕಿಕೊಂಡಿದ್ದು, ಈ ಕೃತಿ ಆ ಲೇಖನ ಮಾಲೆಯಲ್ಲಿ ತೊಂಬತ್ತ ಒಂದನೇ ಕೃತಿಯಾಗಿ ಅರಳಿದ ಕುಸುಮವಾಗಿದೆ.

ಈ ಕೃತಿಯ ಲೇಖಕಿ ಶ್ಯಾಮಲಾ ಮಾಧವ ಮೂಲತಃ ಮಂಗಳೂರಿನವರು. ವಿವಾಹ ನಂತರ ಮುಂಬೈಗೆ ಬಂದ ನಂತರ ಅವರು ಸಾಹಿತ್ಯ ಕೃಷಿಯನ್ನು ಹವ್ಯಾಸವನ್ನಾಗಿಸಿಕೊಂಡವರು.

'ಆ ಲೋಕ ಕಥಾ ಸಂಕಲನ' 'ಬದುಕು ಚಿತ್ರ ಚಿತ್ತಾರ' ಲೇಖನ ಸಂಕಲನ. 'ಸತ್ಯಂಚಯೆ', ಉರ್ದು ಕೃತಿ ಆಲಂಪನದ ಹಿಂದಿ ಅನುವಾದ ಆಲಂಪನಾ. ನಿವೃತ್ತ ಪೊಲೀಸ್ ಅಧಿಕಾರಿ ರಾಮಯ್ಯಾ ರೈ ಅವರ 'ಮೈ ಡೇಸ್ ಇನ್ ಪೊಲೀಸ್' ಕೃತಿಯನ್ನು 'ಪೊಲೀಸ್ ಡೈರಿ' ಹೆಸರಿನಲ್ಲಿ ಅನುವಾದಿಸಿದ್ದು, ಮೇರಿ ಶೆಲ್ಲಿಯ 'ಫ್ರಾಂಕಿನ್ ಸ್ಟೈನ್'ನ್ನು ಕನ್ನಡಕ್ಕೆ, ಎಲ್. ಡ್ಯೂರಾಂಟ್ ಅವರ 'ದಿ. ಸ್ಟೋರಿ ಆಫ್ ಸಿವಿಲೈಸೇಷನ್' ಕೃತಿಯನ್ನು ಕನ್ನಡಕ್ಕೆ, ಎಂ.ಆರ್. ಪೈ ಫೌಂಡೇಶನ್ 'ಆನ್ ಆನ್ ಕಾಮನ್ ಮ್ಯಾನ್' ಕನ್ನಡದಲ್ಲಿ 'ಅಸಾಮಾನ್ಯ ಶ್ರೀ ಸಾಮಾನ್ಯ' ಎಂ.ಆರ್. ಪೈ 'ಗಾನ್ ವಿದ್ ದಿ. ವಿಂಡ್' ಅನುವಾದಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಎಚ್.ವಿ. ಸಾವಿತ್ರಮ್ಮ ದತ್ತಿ ನಿಧಿ ಪ್ರಶಸ್ತಿಯೂ ಲಭಿಸಿದೆ.

ಪ್ರಸ್ತುತ 'ವಾಸ್ತವವಾದದ ಸಾಹಿತಿ ರಾಮಚಂದ್ರ ಉಚ್ಚಿಲ' ಈ ಕೃತಿ ವಿದ್ವಾನ್ ಶ್ರೀ ರಾಮಚಂದ್ರ ಉಚ್ಚಿಲರ ವಾಸ್ತವವಾದದ ಬದುಕು ಮತ್ತು ಬರಹವನ್ನು ಎಳೆ ಎಳೆಯಾಗಿ ನಮ್ಮೆದುರು ತೆರೆದಿಡುತ್ತವೆ. 44 ಪುಟಗಳಲ್ಲಿ ಇವರ ಬದುಕನ್ನು ಶ್ಯಾಮಲಾ ಅವರು ಕಟ್ಟಿಕೊಟ್ಟಿರುವ ರೀತಿ ನಮಗೆ ಆಪ್ತವೆನಿಸುತ್ತವೆ. ಉಚ್ಚಿಲರು ತಮ್ಮ ಹುಟ್ಟೂರು ಸೋಮೇಶ್ವರ ಉಚ್ಚಿಲದ ಕಡಲ ತೆರೆಯ ಚಿತ್ರಗಳನ್ನು ಕನ್ನಡ ಸಾಹಿತ್ಯದ ಪುಟಗಳಲ್ಲಿ ಅತ್ಯಾಕರ್ಷಕವಾಗಿ ಪಡಿಮೂಡಿಸಿದ್ದನ್ನು ಲೇಖಕ ವಿವರಿಸುತ್ತಾ ಹೋಗುತ್ತಾರೆ. ಹೊರನಾಡಿನಲ್ಲಿ ಕನ್ನಡವನ್ನು ಕಟ್ಟಿ ಬೆಳೆಸಿದ ಧೀಮಂತ ಚೇತನ ಅವರು. ಚ.ರಾ. ಎಂದೇ ಪ್ರಸಿದ್ಧರಾದ ಇವರು ಕನ್ನಡ ನಾನು ನುಡಿಗಾಗಿ ಮುಂಬೈ ನೆಲದಲ್ಲಿ ತನ್ನನ್ನು ತಾನು ತೇದಿಕಂಡವರು. ಕವಿ ಮುದ್ದಣ ಪ್ರೀತಿಯನ್ನು ಯಕ್ಷಗಾನದ ಆಸಕ್ತಿಯನ್ನು ಅಧ್ಯಯನವನ್ನು ನಿರಂತರವಾಗಿ ಮಾಡಿದ ಕರ್ಮಯೋಗಿ ಇವರು.

1920 ಜೂನ್ 20 ರಂದು ಮಂಗಳೂರು ಪಕ್ಕದ ಸೋಮೇಶ್ವರ ಉಚ್ಚಿಲದಲ್ಲಿ ಜನಿಸಿದ ಇವರ ಮನೆಯ ಹಿಂದೆ ಮೊರೆವ ಅರಬ್ಬೀ ಸಮುದ್ರ, ದಕ್ಷಿಣಕ್ಕೆ ರಾಮಾಯಣ ಕಾಲದ ಐತಿಹ್ಯವಿರುವ ಕೋಟೆ. ವಿಷ್ಣು ಮೂರ್ತಿ ದೇವಸ್ಥಾನ, ಕೋಟೆಯ ಕೆಳಗೆ ಬಂಡೆಗಳ ನಡುವೆ ಜಟಾಯು ತೀರ್ಥ, ಉತ್ತರಕ್ಕೆ ಸೋಮೇಶ್ವರ ದೇವಸ್ಥಾನ, ಕೆಳಗೆ ಬೃಹದಾಕಾರದ ರುದ್ರಶಿಲೆ, ವಿಷ್ಣುಮೂರ್ತಿ ದೇವಸ್ಥಾನದ ಕೋಟೆ, ಟಿಪ್ಪು ಸುಲ್ತಾನ್‌ನ ಕೋಟೆಯಾದರೆ, ಸೋಮೇಶ್ವರ ದೇವಸ್ಥಾನ ರಾಣಿ ಅಬ್ಬಕ್ಕ ದೇವಿಯ ಕೋಟೆ. ಇಂತಹ ಐತಿಹಾಸಿಕ ಪ್ರಸಿದ್ಧ ಊರಿನಲ್ಲಿ ಇವರ ಜನನ.

ಉಚ್ಚಿಲ ಬೋವಿ ಕಿರಿಯ ಶಾಲೆಯಲ್ಲಿ ಐದನೇ ಕ್ಲಾಸಿನಲ್ಲಿ ಕಲಿಯುತ್ತಿರುವಾಗಲೇ ಅವರು ಆಡಿದ ಶಿವರಾಮ ಕಾರಂತರ 'ಮಿಸ್ಟರ್ ಡುಮಿಂಗೋ' ನಾಟಕದಲ್ಲಿ ಇವರದ್ದು ಬ್ರಾಹ್ಮಣ ಹುಡುಗ ರಾಮನ ಪಾತ್ರ. ಮುಂದೆ ಕೋಟೆಕಾರಿನಲ್ಲಿ ಹೈಯರ್ ಎಲಿಮೆಂಟರಿ ಶಾಲೆ ಸೇರಿದ ಇವರು ಅಕ್ಕದಲ್ಲಿರುವ ತನ್ನ ತಂದೆಯ ಮನೆಯಲ್ಲಿ ನೆಲೆಸಿದ್ದರಿಂದ ಅಲ್ಲಿಯ ಹತ್ತಿರದಲ್ಲಿರುವ ಭಗವತೀ ಸ್ಥಾನದ ಹತ್ತಿರ ಉಗ್ಗಪ್ಪ ಶೆಟ್ಟರ ಹೊಟೇಲಿನಲ್ಲಿ ಏರ್ಪಡಿಸುತ್ತಿದ್ದ ರಾಮಾಯಣ ಪ್ರವಚನದಿಂದ ಆಕರ್ಷಿತರಾದರು. ಅಲ್ಲಿ ಎಂಟನೇ ತರಗತಿಯಲ್ಲಿ ಫೇಲ್ ಆದ ಇವರು ಹಂಪನ್‌ಕಟ್ಟೆ ಮೇಳದಲ್ಲಿ ಕುಣಿತ, ನಿತ್ಯವೇಷ ಕೋಡಂಗಿ ವೇಷ ಕಟ್ಟಿ ವೇಷ ಕಲಿತುಕೊಂಡರು.

ತಾಯಿಯವರು ಹೇಳುತ್ತಿದ್ದ ಮಲಯಾಳಂ ಕೆಳದಿ ಪಾಟು ಪಾಡ್ದನ ಅವರ ಮೇಲೆ ಅಪಾರ ಪ್ರಭಾವ ಬೀರಿತು.

1937 ರಲ್ಲಿ ಊರಿಗೆ ಬಂದ ಅವರ ತಂದೆಯವರಿಗೆ ಮಗನ ಯಕ್ಷಗಾನದ ಆಸಕ್ತಿ ತುಂಬ ಸಿಟ್ಟು, ಅಸಮಾಧಾನ ಉಂಟು ಮಾಡಿತ್ತು. ಆಗ ಒಂದು ದಿನ ಹೇಳದೆ ಮನೆ ಬಿಟ್ಟು ಮಂಗಳೂರಿ ಹೋಗಿ ಅಲ್ಲಿಂದ ಹಡಗಿನಲ್ಲಿ ಅವರು ಮುಂಬೈ ತಲುಪಿದರು. ಎರಡು ವರ್ಷಗಳ ಹಿಂದೊಮ್ಮೆ ತಂದೆಯವರ ಬಳಿಗೆ ಬಂದಿದ್ದ ಅವರಿಗೆ ಕೋಟೆ ಪ್ರದೇಶ ಪರಿಚಿತವೇ ಆಗಿತ್ತು. ಅಂತೂ ಮುಂಬೈ ಬಂದು ಸೇರಿದ ಅವರು ಇಂಗ್ಲಿಷ್ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ಲೈಬ್ರೇರಿಯನ್ ಸೋಮನಾಥ ಕರ್ಕೇರ ಅವರ ಪರಿಚಯವಾಗಿ ಸಾಕಷ್ಟು ಕೃತಿಗಳನ್ನು ಓದುವ ಅವಕಾಶ ದೊರಕಿತು. ಮುಂದೆ ಬಾಬು ಮೆಂಡನ್‌ರ ಪರಿಚಯವಾಗಿ ಅವರು ಅತಿಕಾಯ ಕಾಳಗದಲ್ಲಿ ವಿಭೀಷಣನ ಪಾತ್ರ ಮಾಡುವಂತಾಯಿತು.

1939 ರಲ್ಲಿ ಇವರು ಮಾರ್ಕಂಟೈಲ್ ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿದರು. ಇಲ್ಲಿ ಅವರಲ್ಲಿ ಯಕ್ಷಗಾನದ ಹುಚ್ಚು, ಓದುವ ಹುಚ್ಚು ಕಡಿಮೆಯಾಗಿ ಚೆಂಡಾಟದ ಹುಚ್ಚು ತಗಲಿಕೊಂಡಿತು. ಮುಂದೆ ಅವರು ಕರ್ನಾಟಕ ರಾತ್ರಿ ಶಾಲೆಗೆ ಸೇರಿದರು.

1944 ರಲ್ಲಿ ಕೈ ಬರಹದ ಪತ್ರಿಕೆಯೊಂದು ಪ್ರಕಟಗೊಂಡಾಗ ಅದರಲ್ಲಿ ಪ್ರಕಟಗೊಂಡ 'ಕನ್ನಡದ ಮುನ್ನಡೆ' ಅವರ ಪ್ರಥಮ ಪ್ರಕಟಿತ ಲೇಖನ. ಅದನ್ನು ಓದಿ ಮೆಚ್ಚಿದ ದಿ. ಶಿವರಾಮ ಕಾಂಚನ್ ಉಚ್ಚಿಲರನ್ನು ಮದರ್ ಇಂಡಿಯಾ ಶಾಲೆಗೆ ಕಲಿಸಲು ಹಚ್ಚಿದರು. ಮುಂದೆ ಪೊನ್ನಮ್ಮರನ್ನು ವಿವಾಹವಾದ ಬಳಿಕ ಇವರು ಹಿಂದೆ ನೋಡಲಿಲ್ಲ.

ವಾಚನಾಲಯದ ಭಂಡಾರಿ ಹೊಸಬೆಟ್ಟು ಸೋಮನಾಥರ ಪರಿಚಯವಾಗಿ ಉಚ್ಚಿಲರು ತಾನು ಕೆಲಸಮಾಡಿಕೊಂಡಿರುವ ಬ್ಯಾಂಕಿನಪ್ಪಿಯೂ ಒಂದು ವಾಚನಾಲಯ ತೆರೆಯುವ ಹಾಗೆ ಮಾಡಿದರು. ಕರ್ನಾಟಕ ವಾಚನಾಲಯದಲ್ಲಿ ಅವರಿಗೆ ಹಳಗನ್ನಡ ಓದುವ ಹವ್ಯಾಸವನ್ನು ಬೆಳೆಸಿತು. ಸೋಮನಾಥ ಅವರು ಪ್ರಾರಂಭಿಸಿದ ನುಡಿ ಪತ್ರಿಕೆಯನ್ನು ಸೇರಿದ ಚ.ರಾ. ಅವರು ಎಷ್ಟು ಕಷ್ಟ ಬಂದರೂ ನುಡಿಯನ್ನು ಬಿಡಲಿಲ್ಲ. ಅಥವಾ ನುಡಿ ಅವರನ್ನು ಬಿಡಲಿಲ್ಲವೇನೋ. ಶ್ರೀನಿವಾಸ ಹಾವನೂರು, ವ್ಯಾಸರಾಯ ಬಲ್ಲಾಳ, ಎಂ.ವಿ. ಕಾಮತ್, ಕುಳಕುಂದ ಶಿವರಾಮ ಹೀಗೆ ನಡು ಬಳಗ ಬೆಳೆಯುತ್ತಾ ಹೋಯಿತು. ಇದರಲ್ಲಿ ಉಚ್ಚಿಲರ ಕ್ರೀಡಾ ವರದಿ ಜನಪ್ರಿಯಗೊಂಡಿತು. ವ್ಯಾಸರಾಯ ಬಲ್ಲಾಳರ 'ಯಾವ ಬೆಲೆ ಶಾಂತಿಗಾಗಿ' ಲೇಖನಕ್ಕೆ ಸರಕಾರದಿಂದ ಎಚ್ಚರಿಕೆಯೂ ಬಂದಿತ್ತು. ಅಲ್ಲದೆ, ಬಲ್ಲಾಳರ 'ಹೇಮಂತ ಗಾನ' ಕೃತಿಗೆ ನುಡಿಯು ಸ್ಫೂರ್ತಿಯಾಯಿತು. ನಾಟಕ, ಯಕ್ಷಗಾನ ಅಲ್ಲದೆ, ತಾಳಮದ್ದಳೆ ಇವುಗಳ ವಿಮರ್ಶೆ ಕೂಡಾ ನುಡಿಯಲ್ಲಿ ಪ್ರಕಟಗೊಂಡು ಜನಪ್ರಿಯತೆ ಗಳಿಸಿದವು. ಆದರೆ, 1950 ರಲ್ಲಿ

✍ ಡಾ. ಕರುಣಾಕರ್ ಎನ್. ಶೆಟ್ಟಿ ಪಣಿಯೂರ್

'ನುಡಿ' ಪತ್ರಿಕೆ ನಿಂತು ಹೋಯಿತು. 1950ರಲ್ಲಿ ಮದರ್ ಇಂಡಿಯಾ ಶಾಲೆ ತೊರೆದು ಬಾಂಬೆ ಪೋರ್ಟ್ ಶಾಲೆ ಸೇರಿದರು. ಇಲ್ಲಿ ಭಾವ ಗುಡ್ಡಪ್ಪ ಐಲ್ ಅವರೊಡನೆ ಕೂಡಿ ಸುಲಭ ವ್ಯಾಕರಣ ಪುಸ್ತಕ ರಚಿಸಿದುರ.

ಮುದ್ದಣ ಜಯಂತಿಯನ್ನು ಆಚರಿಸುವ ಉಪಕ್ರಮದ ಮೂಲಸ್ಫೂರ್ತಿ ಬಲ್ಲಾಳರೆಂದು ಚ.ರಾ. ಹೇಳಿಕೊಂಡಿದ್ದಾರೆ. ಮುದ್ದಣ ಜಯಂತಿ ಆಚರಿಸುತ್ತಿದ್ದ ಸಾಹಿತ್ಯ ಕೂಟ ಮತ್ತೆ ಅದನ್ನು ಆಚರಿಸುವ ಉತ್ಸಾಹ ತೋರದ್ದರಿಂದ ಪ್ರಗತಿಶೀಲ ಕನ್ನಡಿಗರೆಲ್ಲ ಸೇರಿ ಪೋರ್ಟ್‌ನ ಕಾಮಾ ಹಾಲ್‌ನಲ್ಲಿ ಕೃಷ್ಣ ಕುಮಾರ್ ಕಲ್ಲೂರರ ಅಧ್ಯಕ್ಷತೆಯಲ್ಲಿ ಅಂದು ನಡೆದ ಮುದ್ದಣ ಜಯಂತಿ ಇಂದೂ ಪೋರ್ಟ್ ಶಾಲೆಯ ವಿದ್ಯಾರ್ಥಿಗಳಿಂದ ಮುಂಬಯಿಯಲ್ಲಿ ಆಚರಿಸಲ್ಪಡುತ್ತಿದೆ.

'ನುಡಿ' ಪತ್ರಿಕೆಯಲ್ಲಿ ಚ.ರಾ. ಬರೆದ ಎರಡು ಮೂರು ಕವನಗಳು ಪ್ರಕಟವಾಗಿದ್ದವು. ಗೆಳೆಯ ಶೇಖರ ಇಡ್ಯಾ ಇವರ ನೆರವಿನಿಂದ ಚ.ರಾ. ಅವರು ಯಕ್ಷಗಾನ ಸಂರಕ್ಷಣಾ ಸಮಿತಿ ಪ್ರಾರಂಭಿಸಿದರು. ಇವರ ಪ್ರತಿಭಟನೆ ಕೆವಸ್ಜಿ ಜಹಾಂಗೀರ್ ಹಾಲ್, ಷಣ್ಮುಖಾನಂದ ಸಭಾಗೃಹ, ಕಿಂಗ್ ಜಾರ್ಜ್ ಹಾಲ್‌ನ ಎದುರಿಗೆ ನಡೆಯುತ್ತಿದ್ದವು. ಈ ಸಂರಕ್ಷಣಾ ಸಮಿತಿಯ ಕಾರ್ಯಚಟುವಟಿಕೆಯ ಬಗ್ಗೆ ಕೇಳಿದ ಡಾ. ಶಿವರಾಮ ಕಾರಂತರು ಉಚ್ಚಿಲರೆ ಇದಕ್ಕಿಂತ ಒಳ್ಳೆಯ ಕೆಲಸ ಬೇರೆ ಏನೂ ಇಲ್ಲವೇ? ಇದನ್ನು ಯಾರು ಅರ್ಥಮಾಡಿಕೊಳ್ಳುತ್ತಾರೆ? ಅಂದಿದ್ದರೂ ಮತ್ತೊಮ್ಮೆ ಇಂತಹ ಸಂಘಟನೆಗಳು ಅಗತ್ಯವಾಗಿ ಬೇಕು ಅಂದಿದ್ದರು.

ಜನಪತ್ರಿಕೆ, ವಾರ ಪತ್ರಿಕೆಯಲ್ಲಿ ಚ.ರಾ. ಅವರ ಮುಂಬಯಿ ಪತ್ರ ಅಂಕಣ ಬರಹ ಶುರು ಮಾಡಿದರು. ಮುಂದೆ ಹುಬ್ಬಳ್ಳಿಯ ಕರ್ಮವೀರಕ್ಕೂ ಮೂರು ವರ್ಷ ಅಂಕಣ ಬರಹ ಬರೆದರು.

ನುಡಿ ನಂತರ ಮುಂಬಯಿ ಸಂಚಾರಿ ಮುಂದೆ ತಾಯಿನುಡಿಗೂ ಚ.ರಾ. ಅಂಕಣ ಬರೆಯುತ್ತಿದ್ದರು. ತಾಯಿನುಡಿಯಲ್ಲಿಯ ಯಕ್ಷಗಾನ ವಿಮರ್ಶೆ ಅವರಿಗೆ ತುಂಬಾ ಜನಪ್ರಿಯತೆ ತಂದುಕೊಟ್ಟವು.

ಚ.ರಾ. ಅವರ ಮೊದಲ ಕೃತಿ 'ಕಡಲ ಕರೆಯ ಚಿತ್ರಗಳು' ಈ ಕೃತಿಯಲ್ಲಿ ತನ್ನೂರ ಚರಿತ್ರೆಯನ್ನು ಅವರು ತೆರೆದಿಟ್ಟಿದ್ದಾರೆ. ಇದು ಮೂರೂವರೆ ದಶಕಗಳ ನಂತರ ಪುನರ್ ಮುದ್ರಣಗೊಂಡಿದೆ. ಹಾ.ಮಾ. ನಾಯಕರು ಈ ಕೃತಿಯು ಕರಾವಳಿ ಪ್ರದೇಶದ ಜನಜೀವನದ ಚಿತ್ರಮಾಲೆ ಎಂದು ಪ್ರಶಂಸಿಸಿದ್ದಾರೆ.

ಚ.ರಾ. ಅವರು ಭೀಮರಾವ್ ಚಿಟಗುಪ್ಪಿ ಮತ್ತು ಹಾವನೂರ ಅವರೊಂದಿಗೆ ಸೇರಿಕೊಂಡು ಯಕ್ಷಗಾನ ಚರಿತ್ರೆ ಮುದ್ದಣ ಮಹಾಕವಿ ಹಾಗೂ ಪಂಪರಾಮಾಯಣ ಕಥೆಯನ್ನು ಹೊಸಗನ್ನಡದಲ್ಲಿ ಸಂಗ್ರಹಿಸಿದ್ದಾರೆ. ಮಿತ್ರ ಗುಡ್ಡಪ್ಪ ಐಲ್ ಅವರೊಂದಿಗೆ ಸೇರಿಕೊಂಡು ಸುಲಭ ವ್ಯಾಕರಣ ಮತ್ತು ಛಂದೋಲಂಕಾರ ಕೈಪಿಡಿ ರಚಿಸಿದ್ದು ಇದು ನಾಲ್ಕು ಮುದ್ರಣ ಕಂಡಿದೆ.

'ಪುನರಪಿ ಜನನಂ' ಅವರು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ ಕೃತಿ. ಮೂಲಕೃತಿ ಪತ್ರಕರ್ತ ಎಂ.ವಿ. ಕಾಮತ್ ಅವರ 'ಬ್ರಾಹ್ಮಿನ್ ಬಾಯ್'. ಇಂತಹ ಉತ್ತಮ ಕೃತಿ ಹಾಗೂ ಸಮರ್ಥ ಅನುವಾದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಷ್ಟು ಪ್ರಸಿದ್ಧಿಗೆ ಬಾರದೆ ಹೋದದ್ದು ನಿಜವಾಗಿಯೂ ವಿಷಾದನೀಯ ಸಂಗತಿಯಾಗಿದೆ.

'ಪದರ' ಉಚ್ಚಿಲ ಅವರ ವಿಮರ್ಶಾ ಲೇಖನಗಳ ಸಂಕಲನ. 'ನೆನಪಿನ ಬುತ್ತಿ' ಅಂಕಣ ಬರಹದಲ್ಲಿ ಮುಂಬಯಿ ಜೀವನದ ಅನೇಕ ವಿಚಾರಗಳಿವೆ. ಕರ್ನಾಟಕ ಮಲ್ಲ ಪತ್ರಿಕೆಯಲ್ಲಿ ಅವರ ಅಂಕಣ ಬರಹ ಪ್ರಸಿದ್ಧಿಗೊಂಡಿದ್ದವು.


ಚ.ರಾ. ಅವರು ಕಂಡದ್ದನ್ನು ಕಂಡ ಹಾಗೆ ಹೇಳುವ ಜಾಯಮಾನದವರಾಗಿದ್ದರೂ ಅವರ ಮನಸ್ಸು ಸದಾ ಕನ್ನಡಕ್ಕಾಗಿ ಮಿಡಿಯುತ್ತಿತ್ತು. ಕನ್ನಡ ಮತ್ತು ಕಾಲ್ಚೆಂಡಾಟದ ಅತ್ಯಂತ ಉಪಾಸಕರಾಗಿದ್ದ ಅವರು 2006 ಆಗೋಸ್ಟ್ 15ರಂದು ಊರಲ್ಲೇ ಸ್ವರ್ಗವಾಸಿಯಾದರು.

ಕೃತಿಯ ಕೊನೆಯಲ್ಲಿ ಹಾವನೂರು ಶ್ರೀನಿವಾಸರು ನಡೆಸಿದ ಸಂದರ್ಶನ, ಮಂಗಳೂರು ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಅಧ್ಯಕ್ಷತೆ ವಹಿಸಿದ್ದಾಗ ಮಾಡಿದ ಭಾಷಣ ಸೇರಿಕೊಂಡಿದ್ದು ಕೃತಿಯ ಮೌಲ್ಯ ಹೆಚ್ಚಿಸಿದೆ. ಉಚ್ಚಿಲರು ವಿದ್ವಾನ್ ಪದವಿ ಪಡೆದ ಧೀಮಂತ ಸಾಹಿತಿ. ಆದರೆ, ಅದರ ಉಲ್ಲೇಖ ಮಾಡಲು ಲೇಖಕಿ ಮರೆತಂತಿದೆ.

ಒಟ್ಟಿನಲ್ಲಿ ವಿದ್ವಾನ್ ರಾಮಚಂದ್ರ ಉಚ್ಚಿಲರ ಬದುಕು ಬರಹಕ್ಕೆ ಬೆಳಕು ತೋರುವಲ್ಲಿ ಅವರ ಬದುಕನ್ನು ತೆರೆದಿಡುವಲ್ಲಿ ಲೇಖಕಿ ಇಲ್ಲಿ ಸಫಲರಾಗಿದ್ದಾರೆ. ಭಾಷೆ ಸರಳವಾಗಿದ್ದು ಕೃತಿ ಓದಿಸಿಕೊಂಡು ಹೋಗುತ್ತದೆ.

ಕೃತಿಗಾರ್ತಿ ಶ್ಯಾಮಲಾ ಮಾಧವ ಹಾಗೂ ಪ್ರಕಟಿಸಿರುವ ಕಾಂತಾವರ ಕನ್ನಡ ಸಂಘ ಇಲ್ಲಿ ಅಭಿನಂದನೆಗೆ ಪಾತ್ರರಾಗುತ್ತಾರೆ. ■

## ಕರ್ನಾಟಕ ಸಂಘ ಮುಂಬಯಿ ಇದರ ಅಧ್ಯಕ್ಷ, ಸಂಗೀತ ವಿಮರ್ಶಕ ಪ್ರಕಾಶ್ ಜಿ. ಬುರ್ಡೆ ನಿಧನ



ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘ ಮುಂಬಯಿ ಇದರ ಅಧ್ಯಕ್ಷರೂ, ಪ್ರಸಿದ್ಧ ಸಂಗೀತ ವಿಮರ್ಶಕರೂ ಆಗಿದ್ದ ಪ್ರಕಾಶ್ ಜಿ. ಬುರ್ಡೆ(77) ಅವರು ಅಲ್ಪ ಕಾಲದ ಅಸೌಖ್ಯದಿಂದ ಆಸ್ಪತ್ರೆಗೆ ಭರ್ತಿಗೊಂಡಿದ್ದು ದಿನಾಂಕ 04.01.2016 ರಂದು ರಾತ್ರಿ ಎಂಟು ಗಂಟೆಗೆ ಸ್ವಗೃಹದಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸಹಿತ ಅಪಾರ ಬಂಧು – ಬಳಗವನ್ನು ಅಗಲಿದ್ದಾರೆ

ಪ್ರಕಾಶ್ ಜಿ. ಬುರ್ಡೆ ಅವರು ಕರ್ನಾಟಕ ಸಂಘ ಮುಂಬಯಿ ಇದರ 79ನೇ ವಾರ್ಷಿಕ ಮಹಾಸಭೆಯಲ್ಲಿ (ಜೂನ್ 2013) ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಗೊಂಡಿದ್ದರು.

ಮೂಲತಃ ಕುಮಟಾದವರಾದ (ಜನನ:24.11.1938) ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ. ಎಸ್ಸಿ ಪದವೀಧರರು. 1959ರಲ್ಲಿ ಮುಂಬಯಿಗೆ ಬಂದಿದ್ದ ಇವರು ಗ್ಲಾಕ್ಸೋ ಕಂಪನಿಯಲ್ಲಿ ಉದ್ಯೋಗಕ್ಕೆ ಸೇರಿ ವಿವಿಧ ಹುದ್ದೆಗಳನ್ನು ಅಲಂಕರಿಸಿ ಸೇವಾ ನಿವೃತ್ತರಾಗಿದ್ದರು.

ತನ್ನ ಉದ್ಯೋಗದ ಕಾರ್ಯಾವಧಿಯಲ್ಲಿ ಪುಣೆ, ನಾಗಪುರ, ಜಬಲ್‌ಪುರ,... ಸಹಿತ ವಿವಿಧೆಡೆ ಕಂಪನಿಯ ಸೇವೆ ಗೈದಿದ್ದು 1956ರಲ್ಲಿ 'ವಾತ್ಸಲ್ಯ' ಕಾದಂಬರಿ ಮತ್ತು 'ಮಾನವನ ಅವತಾರ' (ಬಾಲ ಪ್ರಪಂಚ) ಎಂಬ ಕೃತಿಗಳನ್ನು ರಚಿಸಿದ್ದರು.

ಬುರ್ಡೆ ಅವರ ತಾಯಿ ಭವಾನಿಯವರು ಗದಗ್‌ನ ಪಂಚಾಕ್ಷರಿ ಗವಾಯಿ ಅವರ ಶಿಷ್ಯೆ ಆಗಿದ್ದರು. ಹಾಗಾಗಿ ಚಿಕ್ಕಂದಿನಿಂದಲೇ ಹಿಂದೂಸ್ಥಾನಿ ಸಂಗೀತದ ನಂಟನ್ನು ಬೆಳೆಸಿದ್ದರು. ಬುರ್ಡೆಯವರು 1984ರಿಂದ 1994ರ ತನಕ ಟೈಮ್ಸ್ ಆಫ್ ಇಂಡಿಯಾ, ಇಕೋನಾಮಿಕ್ಸ್ ಟೈಮ್ಸ್, ಆಫ್ಟರ್ ನೂಸ್ ಇತ್ಯಾದಿ ಪತ್ರಿಕೆಗಳಿಗೆ ಸಂಗೀತ ಮತ್ತು ರಂಗಭೂಮಿ ಕುರಿತು ವಿಮರ್ಶೆಗಳನ್ನು ಬರೆಯುತ್ತಿದ್ದರು.

1993ರಲ್ಲಿ ಕರ್ನಾಟಕ ಸಂಘ ಮುಂಬಯಿ ಇದರ ಉಪ ಕಾರ್ಯಾಧ್ಯಕ್ಷರಾಗಿ, ಸಮಿತಿ ಸದಸ್ಯರಾಗಿ, ಕಲಾಭಾರತಿಯ ಸ್ಥಾಪನೆಯ ಸಂದರ್ಭದಲ್ಲಿ ನಿರ್ದೇಶಕರಾಗಿ 2013ರಿಂದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು.

ಬುರ್ಡೆಯವರ ನಿಧನದಿಂದ ಮುಂಬಯಿಯ ಕಲೆ – ಸಂಗೀತ ಕ್ಷೇತ್ರ ಬಡವಾಗಿದೆ. ಅಗಲಿದ ಅವರ ಆತ್ಮಕ್ಕೆ ಮುಂಬಯಿಯ ಸಮಸ್ತ ಸಂಗೀತ ರಸಿಕರ ಪರವಾಗಿ ಮೈಸೂರು ಅಸೋಸಿಯೇಶನ್ 'ನೇಸರು'ವಿನ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.


# ಕನ್ನಡ ಕಾರಣ ಪುರುಷ ರಾ.ಹ.ದೇಶಪಾಂಡೆ

ಡಾ.ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಬರೆದ 'ಕನ್ನಡ ಕಾರಣ ಪುರುಷ ರಾಮಚಂದ್ರ ಹನುಮಂತ ದೇಶಪಾಂಡೆ' ಎಂಬ ಕೃತಿಯೂ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗವು 2015 ರಲ್ಲಿ ಪ್ರಕಟಿಸಿದೆ. ಇದು ಕನ್ನಡ ನೆಲ-ನುಡಿ ಸಾಹಿತ್ಯ ಸಂಸ್ಕೃತಿಯ ಏಳ್ಗೆಗಾಗಿ ದುಡಿದ ಧೀಮಂತ ವ್ಯಕ್ತಿತ್ವದ ದೇಶಪಾಂಡೆಯವರ ಸಾಧನೆ-ಸಿದ್ಧಿಯನ್ನು ಪರಿಚಯಿಸುವ ಕೃತಿ. ಇವರು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಅಖಂಡ ಕರ್ನಾಟಕದ ಕನಸನ್ನು ಕಂಡವರು. ಮಾನವೀಯತೆಯ ಮೆರುಗಿನಿಂದ ಮಿಂಚುವ ಕನ್ನಡಾಭಿಮಾನಿಯ ಜೀವನ ಚರಿತ್ರೆಯನ್ನು ಮುಖಾಮುಖಿಯನ್ನಾಗಿಸುತ್ತದೆ.

ಬ್ರಿಟಿಷರ ಅಧೀನದಲ್ಲಿದ್ದ ಮುಂಬೈ ಕರ್ನಾಟಕಯೂ ಕಂಡ ಸೋಲುಗೆಲುವುಗಳನ್ನು ಒಳಗೊಂಡ ಈ ಕೃತಿ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮುಖ್ಯವೆನಿಸುತ್ತದೆ. ಭಾವನಾತ್ಮಕ ಸಂಬಂಧಗಳೊಡನೆ ಕೊಂಡಿ ತಾಗಿಸಿಕೊಳ್ಳುವ ಮಾನವೀಯ ಸಂಬಂಧದ ವ್ಯಕ್ತಿತ್ವ ಉಳ್ಳ ರಾ.ಹ.ದೇಶಪಾಂಡೆ ನಮ್ಮ ಮನದೊಳಗೆ ನೆಲೆನಿಲ್ಲುತ್ತಾರೆ.

ಈ ಅಧ್ಯಯನದಲ್ಲಿ ರಾ.ಹ.ದೇಶಪಾಂಡೆ ಅವರ ಜನನ, ಬಾಲ್ಯ, ವೃತ್ತಿಜೀವನ, ಕರ್ನಾಟಕ ವಿದ್ಯಾವರ್ಧಕ ಸಂಘ, ಮುಂಬಯಿ ವಿಶ್ವವಿದ್ಯಾಲಯ ಮತ್ತು ರಾ.ಹ.ದೇಶಪಾಂಡೆ, ಮೈಸೂರು ಸಂಸ್ಥಾನ, ಅವರ ಪತ್ರ ವ್ಯವಹಾರ, ಗ್ರಂಥರಚನೆ ಕೌಟುಂಬಿಕ ಜೀವನ, ಚಿತ್ರ ಸಂಪುಟ ಹಾಗೂ ಖ್ಯಾತ ಸಂಶೋಧಕ ಡಾ.ಎಂ.ಎಂ.ಕಲಬುರ್ಗಿ ಅವರು ಮುಡಿಬಾಗಿ ಬರೆದ ಮುನ್ನುಡಿಯನ್ನೊಳಗೊಂಡ 207 ಪುಟ ವ್ಯಾಪ್ತಿಯ ಸುಸಂಸ್ಕೃತ ವ್ಯಕ್ತಿಯ ಸುಂದರ ಹೊತ್ತಿಗೆ.

ಖ್ಯಾತ ಸಂಶೋಧಕ ಡಾ.ಎಂ.ಎಂ.ಕಲಬುರ್ಗಿ ಮುನ್ನುಡಿಯಲ್ಲಿ ಹೇಳಿದಂತೆ "ಕನ್ನಡದ ಕಾರಣ ಪುರುಷ ರಾ.ಹ.ದೇಶಪಾಂಡೆಯವರ (1861) ಹೆಸರನ್ನು ಕೇಳುತ್ತಲೇ ನಮ್ಮ ಕೈ ತಾನಾಗಿಯೇ ಮುಗಿಯುತ್ತವೆ. ಇಂಥವರನ್ನು ನೆನೆಯುವುದೆಂದರೆ ನಮ್ಮ ಬದುಕಿನ ಸೂರ್ಯೋದಯ, ಮರೆಯುವುದೆಂದರೆ ನಮ್ಮ ಬದುಕಿನ ಅಸ್ತಮಾನ." ಎಂಬ ಮಾತಿನಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ ಎಂಬುದು ಅವರ ಸಾಧನೆ-ಸಿದ್ಧಿಯಿಂದ ತಿಳಿದುಬರುತ್ತದೆ. 19ನೇ ಶತಮಾನದ ಉತ್ತರಾರ್ಧದ ಕಾಲಾವಧಿಯಲ್ಲಿ ಇಂಗ್ಲೀಷ ಮತ್ತು ಮರಾಠಿ ಭಾಷೆಗಳ ಪ್ರಭಾವಕ್ಕೆ ಸಿಕ್ಕ ಕನ್ನಡವನ್ನು ಡೆಪ್ಯೂಟಿ ಚೆನ್ನಬಸಪ್ಪನವರು ಕನ್ನಡ ಮಾಧ್ಯಮಕ್ಕೆ ಅವಕಾಶ ಕಲ್ಪಿಸಿಕೊಟ್ಟರೆ ಅದನ್ನು ಸಮಾಜಕ್ಕೆ ಸಂವಹನಗೊಳಿಸಿದ ಕೀರ್ತಿ ರಾ.ಹ.ದೇಶಪಾಂಡೆ ಯವರದು. ಮರಾಠಿ ಪ್ರಭಾವದಿಂದ ಅಳಿವಿನಂಚಿನಲ್ಲಿರುವ ಕನ್ನಡವನ್ನು ಉಳಿಸಿ ಬೆಳೆಸುವ ಜವಾಬ್ದಾರಿಯನ್ನು ಹೊರಲು ಹುಟ್ಟಿ ಬಂದವರಿವರು. ಮುಂಬೈ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದ ಇವರು ಉನ್ನತ ಹುದ್ದೆಯನ್ನು ಪಡೆಯಲು ಸಾಧ್ಯವಿತ್ತಾದರೂ ಕನ್ನಡ ಉಳಿಸುವ ಲಾಂಛೆಗೆ ಶಿಕ್ಷಕನಾಗಿಯೇ ವೃತ್ತಿ ಜೀವನದ ಇಪ್ಪತ್ತು ವರ್ಷಗಳಲ್ಲಿ ಇಪ್ಪತ್ತೊಂದು ಬಾರಿ ಊರಿಂದೂರಿಗೆ ಟ್ರಾನ್ಸಪರ್ ಆಗಿ ಪಡಬಾರದ ನೋವುಣ್ಣುತ್ತಾರೆ. ಶಿಕ್ಷಣ ಇಲಾಖೆಯ ನಿರ್ದೇಶಕರಾಗುವ ಎಲ್ಲಾ ಅರ್ಹತೆಗಳು ಇವರಲ್ಲಿದ್ದರೂ, ಮುಖ್ಯಶಿಕ್ಷಕ ವೃತ್ತಿಯಲ್ಲಿಯೇ ನಿವೃತ್ತಿಯಾಗುವುದು ದುರದಷ್ಟಕರ. ಮರಾಠಿ




ಅಧಿಕಾರಿಗಳ ವರ್ಗಾವಣೆಯ ಬುಟಾಟಿಕೆಗೆ ಅಂಜದೆ-ಅಳುಕದೆ ಕಾಸಿದಷ್ಟೂ ಗಟ್ಟಿಯಾಗಿ ಬಂಗಾರವಾಗುತ್ತಾರೆ. ತನ್ನ ಮನಸ್ಸಿನಲ್ಲಿ ಮೂಡಿದ ಕನ್ನಡಾಭಿಮಾನ ಯೋಚನೆಗಳಿಗೆ ಮೂರ್ತ ರೂಪಕೊಡಲು ಪಣತೊಡುತ್ತಾರೆ. ಪರೋಪಕಾರ ಪ್ರೀತಿ, ತ್ಯಾಗ ಮೊದಲಾದ ಗುಣಗಳಿಂದಾಗಿ ಹೆಚ್ಚು ಹತ್ತಿರವಾಗಿ ಮನದಲ್ಲಿ ನೆಲೆನಿಲ್ಲುತ್ತಾರೆ.

ತನ್ನ ಮೂವತ್ತನೇಯ ವಯಸ್ಸಿನಲ್ಲಿಯೇ (1890) ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದ ಕೀರ್ತಿಗೆ

**✍ ಡಾ. ಸುರೇಶ ಎನ್. ನಾಯ್ಕ, ಹೊನ್ನಾವರ**

ಭಾಜನರಾದವರು. ಕನ್ನಡ ಮನಸ್ಸುಗಳ ಏಕೀಕರಣವೇ ತನ್ನ ಉಸಿರನ್ನಾಗಿಸಿಕೊಂಡು ತಮ್ಮನ್ನು ತೇದುಕೊಂಡವರು 'ಸಿರಿಗನ್ನಡಂ ಗೆಲ್ಗೆ' ಎಂಬ ಧ್ಯೇಯ ವಾಕ್ಯವನ್ನು ಸೃಜಿಸಿದ ಕೀರ್ತಿ ರಾ.ಹ.ದೇಶಪಾಂಡೆಯವರದೆ ಆಗಿರುತ್ತದೆ. ವಾಗ್ಭೂಷಣ ಪತ್ರಿಕೆ, ಪುಸ್ತಕ ಪ್ರಕಟಣೆ, ಕನ್ನಡ ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ ಪುರಸ್ಕಾರ ನೀಡಿ ಚೈತನ್ಯಶೀಲರನ್ನಾಗಿಸಿದವರು. ಇವರಿಗೆ ಅನೇಕ ಹಿರಿಕಿರಿಯ ಮಿತ್ರರು ಬರೆದ ಪತ್ರ ಇಂಗ್ಲೀಷನಲ್ಲಿ ಇದ್ದಾಗ ಅದನ್ನು ಕನ್ನಡದಲ್ಲೇ ಬರೆಯಿರಿ ಎಂದು ಹೇಳಿದ ಕನ್ನಡ ತನದ ಗಂಡೆದೆ ಉಳ್ಳವರಾಗಿದ್ದರು. ಕನ್ನಡ ಮಾತು ತಲೆಯೆತ್ತುವ ಬಗೆಯ ಕುರಿತು ಉಪನ್ಯಾಸ ಮಾಡಿದ ಬಿ.ಎಂ.ಶ್ರೀಯವರು ಮೈಸೂರಿನಿಂದ ಇಂಗ್ಲೀಷನಲ್ಲಿ ಪತ್ರ ಬರೆದಾಗ ಅದನ್ನು ಖಂಡಿಸಿದ ಕನ್ನಡ ಪ್ರೇಮಿ.

ಕನ್ನಡವನ್ನು ವಿಭಿನ್ನ ಆಯಾಮಗಳಿಂದ ಉಳಿಸಿ ಬೆಳೆಸಲು ಗ್ರಂಥಾಲಯವನ್ನು ಪ್ರಾರಂಭಿಸಿ ತನ್ನ ಮಗನನ್ನೇ ಪುಸ್ತಕ ವ್ಯಾಪಾರಕ್ಕೆ ಮೀಸಲಿಟ್ಟವರು. ಕನ್ನಡೇತರ ಜನರನ್ನು ಕನ್ನಡಕ್ಕಾಗಿ ದುಡಿಸಿಕೊಂಡವರು. ಕನ್ನಡಿಗರಲ್ಲಿ ಜಾತ್ಯಾತೀತ ಮನಸ್ಸನ್ನು ಹುಟ್ಟುಹಾಕಿ ಅವರಲ್ಲಿ ಭಾವೈಕ್ಯತೆಯನ್ನು ತರಲು ಧಾರವಾಡದಲ್ಲಿ ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಏರ್ಪಡಿಸಿ ಮನಸ್ಸು ದೊಡ್ಡದಾಗದೆ-ಕೆಲಸ ದೊಡ್ಡದಾಗದು ಎಂಬ ಸಾಮಾಜಿಕ ಬದ್ಧತೆಯನ್ನು ಪ್ರಕಟಿಸಿದ್ದರು. ಮಾಧ್ಯಮಿಕ ಶಾಲೆಗಳಲ್ಲಿ ದೇಶಿ ಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂದು ಶ್ರಮಿಸಿದ ಹೋರಾಟಗಾರ.

ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ಈ ಕೃತಿಯನ್ನು ಬರೆಯಲು ರಾ.ಹ.ದೇಶಪಾಂಡೆ ಅವರು ನಲ್ವತ್ತೈದು ವರ್ಷದಲ್ಲಿ ಬರೆದ 2000 ಪುಟ ಹರವಿನ ದಿನಚರಿಗಳನ್ನು ಆಕರವನ್ನಾಗಿ ಬಳಸಿಕೊಂಡಿದ್ದಾರೆ. ಕನ್ನಡದ ಬೆಳವಣಿಗೆ ಇತಿಹಾಸ, ವ್ಯಕ್ತಿ ಚಿತ್ರಣ, ಪಠ್ಯ ಪುಸ್ತಕಗಳನ್ನು ಪ್ರಕಟಿಸಿದ ಕೀರ್ತಿಗೆ ಭಾಜನರು. ಬದುಕಿನುದ್ದಕ್ಕೂ ಕ್ರೀಯಾಶೀಲರಾಗಿ ಕನ್ನಡಕ್ಕಾಗಿ ದುಡಿಯುತ್ತಾ ಸಾರ್ಥಕ ಜೀವನ ನಡೆಸಿದ್ದಾರೆ. ಅವರ ನಡೆ-ನುಡಿಗಳಲ್ಲಿ ಕನ್ನಡದ ಬೆಚ್ಚನೆಯ ಗುಣಗಳಿದ್ದವು. ಕನ್ನಡ ಮನಸ್ಸನ್ನು ಉತ್ತರ ಕರ್ನಾಟಕದಲ್ಲಿ ಹುಟ್ಟುಹಾಕಿ ದಕ್ಷಿಣ ಕರ್ನಾಟಕಕ್ಕೂ ಪಸರಿಸಿದ ಎತ್ತರದ ಧೀಮಂತ ಕಾರಣ ಪುರುಷರನ್ನು ಪರಿಚಯಿಸುವ ಈ ಕೃತಿ ಕೇವಲ ವ್ಯಕ್ತಿ ಚಿತ್ರಣವಾಗಿರದೆ ಪರಿಸರದ ಚರಿತ್ರೆಯಾಗಿಯೂ ಮುಖ್ಯವೆನಿಸುತ್ತದೆ. ಇದನ್ನು ರಚಿಸಿದ ಸಂಶೋಧಕ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿಯವರ ಶ್ರಮ-ಶ್ರದ್ಧೆ, ದುಡಿತಕ್ಕೆ ವಿಶೇಷ ಅಭಿನಂದನೆಗಳು ಸಲ್ಲುತ್ತದೆ.

ತಾನು ಎಷ್ಟೇನೋವನ್ನು ಅನುಭವಿಸಿದರು ಕನ್ನಡ ಶ್ರೇಯಸ್ಸಿಗೆ ಸದಾ ಜಾಗೃತ ಪ್ರಜ್ಞೆವುಳ್ಳವರಾಗಿದ್ದರು. ಪ್ರತಿ ಪುಟದಲ್ಲಿ ಕಣ್ಣಾಡಿಸಿದರೆ ಅವರ ಘನ ವ್ಯಕ್ತಿತ್ವದ ದರ್ಶನವಾಗುತ್ತದೆ. ಸ್ವರ್ಗಕ್ಕೆ ಕಿಚ್ಚು ಹಚ್ಚುವ ರೀತಿಯಲ್ಲಿ ಬದುಕಿದವರು. ಕನ್ನಡ ಮನಸ್ಸುಗಳು ಎಲ್ಲಿದ್ದರೂ ಗುರುತಿಸುವ ಮನೋಗುಣ ಹೊಂದಿದ್ದರು. ಕನ್ನಡ ಸಾರಸ್ವತ ಲೋಕದ ಎಲ್ಲಾ ಮಗ್ಗಲೂಗಳಲ್ಲೂ ಸಲ್ಲುವ ವಿಶಿಷ್ಟ ಸಂವೇದನಾಶೀಲ ವ್ಯಕ್ತಿ. ಹೀಗೆ ಕನ್ನಡಪ್ರೀತಿ, ವಿದ್ವತ್ತು, ಬೋಧನಾಶೈಲಿ, ಆಡಳಿತ, ಸಾಹಿತ್ಯಿಕ ಜೀವನ ಮುಂತಾದ ವಿಶಿಷ್ಟತೆಯಿಂದ ಮೆರಗನ್ನು ಪಡೆದ ಇಂಥಹ ಮಹಾನುಭಾವರನ್ನು ಮುನ್ನೆಲೆಗೆ ತಂದು ಲೋಕ ಮುಖಕ್ಕೆ ತೆರೆದಿಟ್ಟಿದ್ದಾರೆ.

ದೇಶಪಾಂಡೆಯವರ ವ್ಯಕ್ತಿತ್ವದ ವಿಭಿನ್ನಆಯಾಮುಗಳನ್ನು, ಸೂಕ್ಷ್ಮಾತಿಸೂಕ್ಷ್ಮವಾಗಿ ಅನಾವರಣಗೊಳಿಸಿರುವ ಕುಲಕರ್ಣಿಯವರ ದುಡಿತ ಯಶಸ್ಸನ್ನು ಕಂಡಿದೆ. ರಾ.ಹ.ದೇ.ಅವರು ಕನ್ನಡವನ್ನು ಹೃದಯದಲ್ಲಿಟ್ಟು ಗೌರವಿಸುವ, ಓದುಗರನ್ನು ಸೆಳೆಯುವ ನಿಜಕ್ಕೂ ಕನ್ನಡಿಗರಾಗಿದ್ದರು ಎಂಬುದನ್ನು ಖಚಿತಪಡಿಸುತ್ತದೆ. ಇದಕ್ಕೆ ಅವರ ಹದಿನಾಲ್ಕು ಕೃತಿಗಳೇ ಸಾಕ್ಷಿ. ಎಲೆಮರೆಯ ಕಾಯಿಯಂತಿರುವ ರಾ.ಹ.ದೇಶಪಾಂಡೆಯವರ ಬಹುತ್ವವನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿದ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿಯವರು ಅಭಿನಂದನಾರ್ಹರು. ಇದನ್ನು ಪ್ರಕಟಿಸಿದ ಮುಂಬೈ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ ಅವರಿಗೆ ಕೃತಜ್ಞತೆಗಳು ಸಲ್ಲುತ್ತದೆ.

## ಮುಂಬರುವ ಕಾರ್ಯಕ್ರಮಗಳು

**ಶನಿವಾರ 23.01.2016** ಸಂಜೆ 6.30

**"ಫ್ಯೂಜನ್ ಮ್ಯೂಸಿಕ್"**

**ಶ್ರೀಮತಿ ಗೀತಾ ನವಲೆ ತಂಡ, ಬೆಂಗಳೂರು**

***

**ರವಿವಾರ**

**24.01.2016** ಸಂಜೆ 6.00ರಿಂದ 9.30

**ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ**

(ಮುಂಬಯಿಯ ಕನ್ನಡ ಶಾಲೆಗಳ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು)

***

**ಶುಕ್ರವಾರ** 12.02.2016 ಸಂಜೆ 6.30

ಕನ್ನಡ ನಾಟಕ **"ಮೈ ಥಿಲಿ"**

**ಸ್ಫೂರ್ತಿ ಸಾಂಸ್ಕೃತಿಕ ಸಂಸ್ಥೆ, ಶಿವಮೊಗ್ಗ**

***

**ಶನಿವಾರ** 13.02.2016 ಸಂಜೆ 6.30

ಕನ್ನಡ ನಾಟಕ **"ಆ ರಾತ್ರಿ"**

ಮೈಸೂರು ಅಸೋಸಿಯೇಶನ್ ತಂಡ, ಮುಂಬಯಿ

***

**ರವಿವಾರ**

14.02.2016 ಸಂಜೆ 6.30

ಕನ್ನಡ ನಾಟಕ **"ವ್ಯೂಹ"**

ಶ್ರೀನಾಥ ವಸಿಷ್ಠ ತಂಡ, ಬೆಂಗಳೂರು

## ಖ್ಯಾತ ವೈಣಿಕ ವಿದ್ವಾನ್...

ಹಮೀರ್ ಕಲ್ಯಾಣಿ ರಾಗದಲ್ಲಿ ರೂಪಕ ತಾಳದಲ್ಲಿ ಸುಬ್ಬರಾಯ ಶಾಸ್ತ್ರಿಗಳ ರಚನೆ "ವೆಂಕಟಶೈಲ ವಿಹಾರ" ಕೃತಿಯೊಂದಿಗೆ ಮುಂದುವರೆಯಿತು. ನಂತ ಮೈಸೂರು ವಾಸುದೇವಾಚಾರ್ಯರ ಶ್ರೇಷ್ಠ ಕೃತಿ "ಭಜರೇ ಮಾನಸ" ಎಂಬುದನ್ನು ಅಭೇರಿ ರಾಗದಲ್ಲಿ ನುಡಿಸಿದರು. ಪುರಂದರದಾಸರ ಕೃತಿ "ಓಡಿ ಬಾರಯ್ಯ" ಭೈರವಿ ರಾಗದಲ್ಲಿ ಹಾಗೂ ವ್ಯಾಸರಾಯರ "ಕೃಷ್ಣಾ ನೀ ಬೇಗನೇ ಬಾರೋ" ಕಲ್ಯಾಣಿ ರಾಗದಲ್ಲಿ ನುಡಿಸಿದರು. ಸದಾಶಿವ ಬ್ರಹ್ಮೇಂದ್ರ ಅವರ ರಚಿತ "ಗಾಯಕಿ ವನಮಾಲಿ" ಎಂಬ ಕೃತಿಯೊಡನೆ ಕಛೇರಿಯು ಮುಕ್ತಾಯವಾಯಿತು. 2 ಘಂಟೆಗಳ ಕಾಲ ದೀರ್ಘ ಮೌನದ ಆವರಣ. ಕೇವಲ ವೀಣೆಯ ಝೇಂಕಾರನಾದ, ಇಂಪನ್ನು ಶ್ರೋತೃಗಳು ಆನಂದಿಸಿದರು.

ವರದಿ : **ರಮಾವಸಂತ್**

# ಚಿತ್ರಕಲಾವಿದರ ಚಿತ್ರ ಕಲೆಯ ಪ್ರತಿಭಾ ಪ್ರದರ್ಶನ





ಇದೇ ದಿನಾಂಕ 26.12.2015 ರಂದು ಮುಂಬಯಿಯ ಮಲಬಾರ್ ಹಿಲ್ ರೋಡ್‌ನಲ್ಲಿರುವ ಆರ್ಟ್‌ದೇಶ್ ಗ್ಯಾಲರಿಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಾಯೋಜಕತೆಯಲ್ಲಿ ಐವರು ಯುವ ಚಿತ್ರಕಲಾವಿದರ ಚಿತ್ರ ಕಲೆಯ ಪ್ರತಿಭಾ ಪ್ರದರ್ಶನಕ್ಕೆ ಮೈಸೂರು ಅಸೋಸಿಯೇಷನ್ ಅಧ್ಯಕ್ಷೆ ಕೆ. ಕಮಲಾ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿದರು. ಮುಂಬಯಿವಾಸಿ ಚಿತ್ರಕಲಾವಿದ ಶಾಂತಕುಮಾರ್ ಹತ್ತರ್ಕಿಯವರು ಅತಿಥಿಯಾಗಿ ಭಾಗವಹಿಸಿದ್ದರು. ಇನ್ನೊಬ್ಬ ಕಲಾವಿದೆ ದೀಪ್ತಿ ದಹಿಬಾವ್ಕರ್ ಮತ್ತು ಚಿತ್ರಪ್ರದರ್ಶನಶಾಲೆಯ ವ್ಯವಸ್ಥಾಪಕ ಗೌತಮ್ ದೇಶ್ ಕೂಡ ಉಪಸ್ಥಿತರಿದ್ದರು.

ಎಚ್.ಎಸ್. ಕಟ್ಟೀಮನಿ, ಮಂಜುನಾಥ್, ಸೋಮಶೇಖರ್, ಮುನಯ್ಯ ಮತ್ತು ಪ್ರಕಾಶ್ ಲೆಡ್ವೆ ಇವರೇ ಐವರು ಚಿತ್ರ ಕಲಾವಿದರು. ಇದು ಮುಂಬಯಿಯಲ್ಲಿ ಅವರ ಪ್ರಥಮ ಪ್ರದರ್ಶನವಾಗಿದೆ. ಪ್ರತಿಯೊಬ್ಬರು ಒಂದು ಥೀಮ ಇಟ್ಟುಕೊಂಡು ಐದೈದು ಚಿತ್ರಗಳ ಮಾಲಿಕೆಯನ್ನು ಪ್ರದರ್ಶನಕ್ಕಾಗಿ ಸಿದ್ದಪಡಿಸಿದ್ದರು. ಒಂದೊಂದೂ ಅವರ ಕಲೆಯ ಪ್ರಬುದ್ಧ ಅಭಿವ್ಯಕ್ತಿಯಾಗಿದ್ದವು. ಈ ಪ್ರದರ್ಶನವು ದಿನಾಂಕ 30.12.2015 ರ ವರೆಗೆ ನಡೆದಿದೆ. ಮುಂಬಯಿ ಕನ್ನಡ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಈ ಪ್ರದರ್ಶನದಲ್ಲಿ ಭಾಗವಹಿಸಿ ಕಲಾವಿದರ ಹುಮ್ಮಸ್ಸಿಗೆ ಉತ್ತೇಜನ ಕೊಟ್ಟು ಅವರ ಪ್ರಯತ್ನ ಯಶಸ್ವಿ ಗೊಳಿಸಿದರು.



Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

# ನೇಸರು ಜಾಗತಿಕ ಕನ್ನಡ ಕವನ ಸ್ಪರ್ಧೆ

ಈ ವರ್ಷ ಮೈಸೂರು ಅಸೋಸಿಯೇಷನ್‌ಗೆ 90 ವರ್ಷ ತುಂಬುತ್ತಿರುವುದರಿಂದ ಈ ಸಂಭ್ರಮದ ಆಚರಣೆಯ ಪ್ರಯುಕ್ತವಾಗಿ ಕನ್ನಡ ಕವನ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ ಇಡೀ ವಿಶ್ವದಾದ್ಯಂತ ಇರುವ ಎಲ್ಲಾ ಕನ್ನಡಿಗರು ಇದರಲ್ಲಿ ಭಾಗವಹಿಸಬಹುದಾಗಿದೆ. ಯಾವುದೇ ವಿಷಯದ ಕುರಿತಂತೆ ಕವಿತೆಗಳನ್ನು ರಚಿಸಬಹುದಾಗಿದೆ. ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ.

**ಪ್ರಥಮ ಬಹುಮಾನ** ರೂ. 10000/–
**ದ್ವಿತೀಯ ಬಹುಮಾನ** ರೂ. 5000/–
**ತೃತೀಯ ಬಹುಮಾನ** ರೂ. 3000/–
**ಪ್ರೋತ್ಸಾಹಕ** : ರೂ. 1000/– (ಇಬ್ಬರಿಗೆ)

## ಸ್ಪರ್ಧೆಯ ನಿಯಮಾವಳಿಗಳು:

1) ಕವನಗಳು ಸ್ವರಚಿತವಾಗಿರಬೇಕು. ಅನುವಾದ, ಅನುಕರಣೆ ಆಗಿರಕೂಡದು.
2) ಕವನಗಳು ಸುಮಾರು 30 ಸಾಲಿನ ಮಿತಿಯಲ್ಲಿರಲಿ. ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಸ್ಪುಟವಾಗಿ ಬರೆದು ಕಳುಹಿಸಿ. (ಹಸ್ತಲಿಖಿತ ಯಾ ಕಂಪ್ಯೂಟರ್ ಮುದ್ರಿತ). ಇ–ಮೇಲ್ ಮೂಲಕವೂ ಕಳುಹಿಸಬಹುದು.
3) ಕವಿಗಳ ಹೆಸರು, ವಿಳಾಸ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆ ಹಾಗೂ ಇ–ಮೇಲ್ ಇದ್ದಲ್ಲಿ ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಿ.
4) ಒಬ್ಬರು ಒಂದೇ ಕವನವನ್ನು ಬರೆದು ಕಳುಹಿಸಬೇಕು.
5) ಸ್ಪರ್ಧೆಗೆ ಬಂದ ಕವನಗಳನ್ನು ಮರಳಿಸಲಾಗುವುದಿಲ್ಲ.
6) ತೀರ್ಪುಗಾರರ ತೀರ್ಮಾನವೇ ಅಂತಿಮ.
7) ಕವನಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ 15.02.2016
8) ತೀರ್ಪುಗಾರರ ತೀರ್ಮಾನವನ್ನು ಏಪ್ರಿಲ್ 15ಕ್ಕೆ ಜಾಹೀರುಗೊಳಿಸಲಾಗುವುದು.

ಆಯ್ಕೆಯಾದ ಕವನಗಳನ್ನು ಮೈಸೂರು ಅಸೋಸಿಯೇಷನ್‌ನ ಮಾಸಿಕ 'ನೇಸರು' ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಕವನ ಕಳುಹಿಸಬೇಕಾದ ವಿಳಾಸ :**

**The Mysore Association, Mumbai**
**393, Bhau Daji Road,**
**Matunga, Mumbai – 400019**
**Email: kavana.nesaru@gmail.com**

---

**ಮೈಸೂರು ಅಸೋಸಿಯೇಷನ್ ಮುಂಬಯಿ** ಮತ್ತು **ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ**

ಇವರ ಸಂಯುಕ್ತ ಆಶ್ರಯದಲ್ಲಿ

## ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ - 2015-16

ದಿನಾಂಕ ಮತ್ತು ವೇಳೆ : ಶನಿವಾರ 16.01.2016
ಸಂಜೆ 05.00ರಿಂದ

ಉಪನ್ಯಾಸಕರು : ಡಾ. ಜಯಂತ ಕಾಯ್ಕಿಣಿ
ಖ್ಯಾತ ಸಾಹಿತಿ

ವಿಷಯ : ಕುವೆಂಪು; ಕವಿ ನೆನಪಿನ ಸವಿಯಾನ

ದಿನಾಂಕ ಮತ್ತು ವೇಳೆ : ರವಿವಾರ 17.01.2016
ಬೆಳಿಗ್ಗೆ 11.00ರಿಂದ
ಮಧ್ಯಾಹ್ನ 1.00ರ ವರೆಗೆ

ಕೃತಿ ಬಿಡುಗಡೆ : ಜಯಂತ ಕಾಯ್ಕಿಣಿ ಅವರ ಕಥನಾವರಣ

ಕೃತಿಕಾರರು : ಡಾ. ಮಮತಾ ರಾವ್
(ವಿಮರ್ಶಕಿ, ಲೇಖಕಿ)

ಕೃತಿಯ ಕುರಿತು : ಶ್ರೀಮತಿ ರಮಾ ಉಡುಪ

ಉಪನ್ಯಾಸಕರು: : ಡಾ. ಜಯಂತ ಕಾಯ್ಕಿಣಿ
ಖ್ಯಾತ ಸಾಹಿತಿ

ವಿಷಯ : ನಾನು ಮತ್ತು ನನ್ನ ಸಾಹಿತ್ಯ

**ಸ್ಥಳ:**
ಮೈಸೂರು ಅಸೋಸಿಯೇಷನ್ ಸಭಾಗೃಹ,
393 ಭಾವು ದಾಜಿ ರಸ್ತೆ,
ಮಾತುಂಗ, ಮುಂಬಯಿ

*ತಮಗೆಲ್ಲ ರಿಗೂ ಹಾರ್ದಿಕ ಸ್ವಾಗತ*

**ಡಾ| ಜಿ. ಎನ್. ಉಪಾಧ್ಯ**
ಮುಖ್ಯಸ್ಥರು, ಕನ್ನಡ ವಿಭಾಗ,
ಮುಂಬಯಿ ವಿಶ್ವವಿದ್ಯಾಲಯ
ವಿದ್ಯಾನಗರಿ, ಮುಂಬಯಿ-400 098
✆ 022-26543530

**ಕಮಲಾ**
ಅಧ್ಯಕ್ಷರು
ಮೈಸೂರು ಅಸೋಸಿಯೇಷನ್, ಮುಂಬಯಿ
ಮಾಟುಂಗ, ಮುಂಬಯಿ-400 019
✆ 022- 2402 4647

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938